**IN THE COURT OF 1ST ADDL. DISTRICT AND SESSIONS JUDGE, DAVANAGERE.**

S.C.9/2023

P.W. 16

C.W. 25

Duly sworn on 26-03-2024

| | | |
|---|---|---|
| Name Sri: Smt | : | Dr. Venkatesh G N |
| Name of Father/ Husband | : | Nanrao |
| Age | : | 37 year |
| Designation | : | Senior Scientific officer, Audio and video section, RFSL , Hubballi |
| Residing at | : | Hubballi |

**Main chief examination by: Ld. PP.**

From 2021 till date I have been working as Senior Scientific officer at RFSL, Hubballi

On 18-07-2022 our Mobile forensic section has sent one article to my section for video analysis. On verification the seal found on the article was intact and tallied with sample seal. The description found on the article corresponds to those that of the present in the invoice.

On opening the article for the examination, I found one Vivo Mobile phone as per the description noted in my report. The said mobile was subjected to forensic acquisition and analysed for alleged video files. On examination the Vivo mobile phone it contains two video filed and their descriptions and details are given in my report. Based on frame analyses , the video files are continuous and genuine.

After examination the article was sealed, packed, affixed sample seal

and sent to IO along with report. Now I see the report, it is already marked as Ex.P.19 and signature is marked as Ex.P.19(a). Now I see the examined article and it is already marked as Ex.P.4. Now I see the video clippings.

**Cross examination by Sri LU advocate for Accused.**

Accused counsel absent. Hence cross examination recorded as nil.

**(Typed to my dictation in Open Court)**

R, O, I and A C,

I-Addl. District and sessions judge, Davanagere.

Co-ordinator.

(Dr.Mallik Ahemed Pasha)
Scientific officer, DNA section,
RFSL, Hubballi.

**IN THE COURT OF 1ST ADDL. DISTRICT AND SESSIONS JUDGE, DAVANAGERE.**

S.C.9/2023

P.W. 15

C.W. 17

Duly sworn on 26-03-2024

| | | |
|---|---|---|
| Name Sri: Smt | : | Dr.Siddaramappa |
| Name of Father/ Husband | : | Ontigara Mallappa |
| Age | : | 42 year |
| Designation | : | Scientific officer, Mobile forensic section, RFSL , Hubballi |
| Residing at | : | Hubballi |

**Main chief examination by: Ld. PP.**

From 2022 till date I have been working as Scientific officer at RFSL, Hubballi

On 17-03-2022 our office has received one sealed article from Davangere Rural Police station, Davangere, in Cr.No.63/22 through CPC-101- Arunkumar.K.S. Reception section of our office received and registered and was sent to Mobile forensic section for examination.

I received sealed article and on verification the seal found on the article was intact and tallied with sample seal. The description found on the article corresponds to those that of the present in the invoice.

On opening the article for the examination, I found one Vivo Mobile phone as per the description noted in my report. The said mobile was

subjected to forensic acquisition and analysed for alleged video and its geniality. On examination the Vivo mobile phone contains three alleged videos. The said videos are extracted, and transferred to Pen drive and given it along with report to the concerned police. Now I see the mobile phone and videos , examined by me. Among three videos two are visible and one was not visible.

After examination the article was sealed, packed, affixed sample seal and sent to IO along with report. Now I see the report, it is already marked as Ex.P.18 and signature is marked as Ex.P.18(a). Now I see the examined article and it is already marked as Ex.P.4. Now I see the pen drive it is already marked as Ex.P.15.

**Cross examination by Sri LU advocate for Accused.**

Accused counsel absent. Hence cross examination recorded as nil.

**(Typed to my dictation in Open Court)**

R, O, I and A C,

I-Addl. District and sessions judge, Davanagere.

Co-ordinator.

(Dr.Mallik Ahemed Pasha)
Scientific officer, DNA section,
RFSL, Hubballi.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 14

CW- 10

ಪ್ರ. ಬೋ. ದಿನಾಂಕಃ 02-03-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಅರುಣ್ ಕುಮಾರ್ |
| ತಂದೆ/ಗಂಡನ ಹೆಸರು | : | ಕೃಷ್ಣಮೂರ್ತಿ ಎಸ್ |
| ವಯಸ್ಸು | : | 31 ವರ್ಷ |
| ಉದ್ಯೋಗ | : | ವ್ಯವಸಾಯ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನಗೆ ಗೊತ್ತು. ಮೃತ ಯುವರಾಜ ನನಗೆ ಗೊತ್ತು. ಚಾಸಾ-15 ನನಗೆ ಗೊತ್ತು. ಯುವರಾಜ ಎನ್ನುವವನು ನೇಣು ಹಾಕಿಕೊಕಾಂಡು ಮೃತಪಟ್ಟಿದ್ದಾನೆ. ಯುವರಾಜನಿಗೆ ಮತ್ತು ಹಾಲಿನಡೈರಿ ಸಿದ್ದಪ್ಪನಿಗೆ ಗಲಾಟೆಯಾಗಿದ್ದು, ಸಿದ್ದಪ್ಪ ಬೆದರಿಕೆ ಹಾಕಿದ್ದರಿಂದ ಆತ ನೇಣುಹಾಕಿಕೊಂಡು ಸತ್ತಿದ್ದಾನೆ. ಮೃತ ಯುವರಾಜ ಉಷಾ ಎನ್ನುವವರ ಮನೆಗೆ ಹೋಗಿ ಬಂದು ಮಾಡುತ್ತಿದ್ದ, ಅದನ್ನು ನೋಡಿ ಹಾಲಿಡೈರಿ ಸಿದ್ದಪ್ಪ ನೀನು ಯಾಕೆ ಅಲ್ಲಿಗೆ ಹೋಗುತ್ತೀಯಾ, ನಿನಗೇನು ಸಂಬಂಧ, ನಿನಗೇನು ಕೆಲಸ, ನೀನು ಅಲ್ಲಿಗೆ ಹೋದರೆ ಸಾಯಿಸುತ್ತೇನೆ, ಹೊಡೆಯುತ್ತೇನೆ ಎಂದು ಯುವರಾಜನಿಗೆ ಜೀವ ಬೆದರಿಕೆ ಹಾಕಿದ್ದ. ಆ ಸಂಬಂಧ ಚಾಸಾ-1 ರವರು ದೂರು ನೀಡಿದ್ದರು. ಸಾಕ್ಷಿ ನಿಪಿ.1 ರ ದೂರಿನಲ್ಲಿ ತನ್ನ ಸಹಿ ನೋಡಿ , ಗುರುತಿಸಿ , ಅದು ನನ್ನ ಬರವಣಿಗೆಯಲ್ಲಿದೆ , ಅದನ್ನು ಚಾಸಾ-1 ರವರು ಹೇಳಿದಂತೆ ಬರೆದಿರುತ್ತೇನೆ ಎಂದು ನುಡಿದಿರುತ್ತಾರೆ. ಸಾಕ್ಷಿಯ ಸಹಿಯನ್ನು ನಿಪಿ.1(ಸಿ) ಎಂದು ಗುರುತಿಸಲಾಯಿತು. ಮೃತ ದೇಹವನ್ನು ಸಿ ಜಿ ಆಸ್ಪತ್ರೆಗೆ ತೆಗೆದುಕೊಂಡು ಬಂದಿದ್ದರು. ಸದರಿ ಯುವರಾಜ ನನ್ನ ಸಾವಿಗೆ ಆರೋಪಿ ಕಾರಣ ಎಂದು ವಿಡಿಯೋ ಮಾಡಿ ಸತ್ತಿದ್ದ. ಆತನ ಸಾವಿನ ಬಗ್ಗೆ ಸಿಜಿ ಆಸ್ಪತ್ರೆಯಲ್ಲಿ ತಿಳಿದುಕೊಂಡಿದ್ದೇನೆ. ಸದರಿ ವಿಡಿಯೋ ನೋಡಿದರೆ ಗುರುತಿಸುತ್ತೇನೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಚಾಸಾ-1 ನನ್ನ ಚಿಕ್ಕಪ್ಪನ ಮಗ. ಮೃತ ಯುವರಾಜ ನನ್ನ ಸಂಬಂಧಿಕ. ಉಷಾ ಎನ್ನುವವರು ಸಹ ನಮ್ಮ ಸಂಬಂಧಿಕರು. ಆರೋಪಿ ಹಾಲಿನಡ್ಕೈರಿ ಸಿದ್ದಪ್ಪ ಮತ್ತು ಮೃತ ಸಂಬಂಧಿಕರಲ್ಲ. ಉಷಾ ಎನ್ನುವವರಿಗೆ ಆರೋಪಿ ಲೋನ್ ಕೊಡಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆ ವಿಚಾರವಾಗಿ ಆರೋಪಿ ಉಷಾ ರವರ ಮನೆಗೆ ಹೋಗುತ್ತಿದ್ದ ಬಗ್ಗೆ ನನಗೆ ಗೊತ್ತಿರುವುದಿಲ್ಲ. ಮೃತ ಯುವರಾಜ ತನ್ನ ವೈಯಕ್ತಿಕ ಕಾರಣಕ್ಕೆ ನೇಣು ಹಾಕಿಕೊಂಡಿದ್ದ ಎನ್ನುವುದು ಸರಿಯಲ್ಲ. ಆತನಸಾವಿಗೆ ಆರೋಪಿ ಕಾರಣನಲ್ಲ ಎನ್ನುವುದು ಸರಿಯಲ್ಲ. ಆಡಿಯೋ ಮತ್ತು ವಿಡಿಯೋವನ್ನು ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಮೃತ ಯುವರಾಜನ ಸಾವಿಗೆ ಆರೋಪಿ ಕಾರಣನಲ್ಲ ಎನ್ನುವುದು ಸರಿಯಲ್ಲ. ವೈಯಕ್ತಿಕ ದ್ವೇಷಕ್ಕಾಗಿ ಸುಳ್ಳು ಪ್ರಕರಣ ದಾಖಲು ಮಾಡಲಾಗಿದೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ:-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 13

CW- 24

ಪ್ರ. ಬೋ. ದಿನಾಂಕಃ 07-02-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಹಾರುನ ಅಕ್ತರ್ |
| ತಂದೆ/ಗಂಡನ ಹೆಸರು | : | ನಜೀರ್ ಪಾಷಾ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಪಿಎಸ್ಐ, ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | : | ದಾವಣಗೆರೆ |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.16-03-2022 ರಿಂದ ಇಲ್ಲಿಯವರೆಗೆ ಮೇಲ್ಕಂಡಂತೆ ಕರ್ತವ್ಯ ನಿರ್ವಹಿಸುತ್ತಿರುತ್ತೇನೆ.

ದಿ.15-04-2022 ರಂದು ಈ ಕೇಸಿನ ಕಡತವನ್ನು ಚಾಸಾ-23 ರವರಿಂದ ಪಡೆದುಕೊಂಡು , ಪರಿಶೀಲಿಸಿರುತ್ತೇನೆ. ಅದೇ ದಿನ ಹೆಚ್ಸಿ-98 ಸತೀಶ್ ಮತ್ತು ಪಿಸಿ-220 ಮಹೇಶ್ ರವರನ್ನು ಆರೋಪಿಯ ಪತ್ತೆಗಾಗಿ ನೇಮಿಸಿರುತ್ತೇನೆ. ದಿ.10-05-2022 ರಂದು ಚಾಸಾ-19 ರಮೇಶ್ ರವರು ಹಾಜರುಪಡಿಸಿದ ಪಿಎಂ ವರದಿಯನ್ನು ಪಡೆದು , ಕಡತಕ್ಕೆ ಅಳವಡಿಸಿರುತ್ತೇನೆ. ಅದನ್ನು ನೋಡುತ್ತಿದ್ದು ಈಗಾಗಲೇ ನಿಪಿ.17 ಎಂದು ಗುರುತಿಸಲಾಗಿದೆ. ದಿ.21-06-2022 ರಂದು ಚಾಸಾ-23 ಎಎಸ್ಐ ಗುರುಶಾಂತ್ ರವರನ್ನು ಎಫ್ ಎಸ್ ಎಲ್ ವರದಿ ಪಡೆದುಕೊಂಡು ಬರಲು ಹುಬ್ಬಳ್ಳಿಗೆ ಕಳುಹಿಸಿರುತ್ತೇನೆ.

ದಿ.28-07-2022 ರಂದು ಎಫ್ ಎಸ್ ಎಲ್ ವರದಿಯನ್ನು ಚಾಸಾ-23 ರವರಿಂದ ಪಡೆದಿರುತ್ತೇನೆ. ಅದನ್ನು ನೋಡುತ್ತಿದ್ದು , ನಿಪಿ.18 ಎಂದು ಗುರುತಿಸಲಾಯಿತು. ಅದೇ ದಿನ ಮೃತ ಯುವರಾಜನ ಸಾವಿಗೆ ಆರೋಪಿಯೇ ಕಾರಣ ಎಂದು ತನಿಖೆಯಿಂದ ದೃಢಪಟ್ಟಮೇರೆಗೆ ಆರೋಪಿಯ ವಿರುದ್ಧ ದೋಷರೋಪಣ ಪಟ್ಟಿ ಸಲ್ಲಿಸಿರುತ್ತೇನೆ.

ದಿ.03-10-2022 ರಂದು ಮತ್ತೊಂದು ಎಫ್ ಎಸ್ ಎಲ್ ವರದಿ ಪಡೆದಿರುತ್ತೇನೆ.

ಅದನ್ನು ನೋಡುತ್ತಿದ್ದು ನಿಪಿ.19 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಆರೋಪಿಯನ್ನು ಪತ್ತೆ ಮಾಡಲು ನೇಮಿಸಿದ್ದ ಸಿಬ್ಬಂದಿಗಳು ಆರೋಪಿಯನ್ನು ಪತ್ತೆ ಮಾಡಿರುವುದಿಲ್ಲ. ಮೃತನ ಪಿಎಂ ವರದಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಎಫ್ ಎಸ್ ಎಲ್ ವರದಿಗಳನ್ನು ನಮಗೆ ಅನುಕೂಲಕ್ಕೆ ತಕ್ಕಂತೆ ಪಡೆದಿದ್ದೇನೆ ಎನ್ನುವುದು ಸರಿಯಲ್ಲ. ಮೃತನ ಸಾವಿಗೆ ಆರೋಪಿ ಕಾರಣನಲ್ಲ ಎಂದು ನನ್ನ ತನಿಖೆ ಕಾಲಕ್ಕೆ ಕಂಡು ಬಂದಿದ್ದರೂ ಸಹ ಫಿರ್ಯಾದಿಗೆ ಅನುಕೂಲವಾಗುವಂತೆ ಸುಳ್ಳು ದೋಷರೋಪಣ ಪಟ್ಟಿ ಸಲ್ಲಿಸಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 12

CW- 23

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಗುರುಶಾಂತಯ್ಯ ಬಿ ಎಂ |
| ತಂದೆ/ಗಂಡನ ಹೆಸರು | : | ಶಿವಲಿಂಗಯ್ಯ ಬಿ ಎಂ |
| ವಯಸ್ಸು | : | 53 ವರ್ಷ |
| ಉದ್ಯೋಗ | : | ಪಿಎಸ್ಐ , ಚನ್ನಗಿರಿ ಪೊಲೀಸ್ ಠಾಣೆ |
| ವಾಸ | : | ಚನ್ನಗಿರಿ . |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಮೇ-2017 ರಿಂದ ಜುಲೈ-2023 ರ ವರೆಗೆ ನಾನು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಲ್ಲಿ ಎಎಸ್ಐ ಆಗಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.24-02-2022 ರಂದು ಮಧ್ಯಾಹ್ನ 2-5 ಗಂಟೆ ಸಮಯಲ್ಲಿನಾನು ಠಾಣಾ ಕರ್ತವ್ಯದಲ್ಲಿದ್ದಾಗ ಫಿರ್ಯಾದಿ ಠಾಣೆಗೆ ಹಾಜರಾ ನೀಡಿದ ಲಿಖಿತ ದೂರನ್ನು ಪಡೆದು, ಠಾಣಾ ಮೊಕದ್ದಮೆ ಸಂಖ್ಯೆ.63/22 ರಂತೆ ಪ್ರಕರಣ ದಾಖಲು ಮಾಡಿಕೊಂಡು, ದೂರು ಮತ್ತು ಪ್ರ.ವ.ವರದಿಯನ್ನು ನ್ಯಾಯಾಲಯಕ್ಕೆ ಮತ್ತು ಮೇಲಾಧಿಕಾರಿಗಳಿಗೆ ಸಲ್ಲಿಸಿರುತ್ತೇನೆ.

ಸಾಕ್ಷಿ ನಿಪಿ.1 ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಸಾಕ್ಷಿಯ ಸಹಿಯನ್ನು ನಿಪಿ.1(ಬಿ) ಎಂದು ಗುರುತಿಸಲಾಯಿತು. ಪ್ರ.ವ. ವರದಿಯನ್ನು ನೋಡುತ್ತಿದ್ದು ಅದನ್ನು ನಿಪಿ.16 ಎಂದು, ಸಾಕ್ಷಿಯ ಸಹಿಯನ್ನು ನಿಪಿ.16(ಎ) ಎಂದು ಗುರುತಿಸಲಾಯಿತು.

ಫಿರ್ಯಾದಿ ದೂರು ಕೊಡುವ ಕಾಲಕ್ಕೆ ಮೃತ ಯುವರಾಜನ ಮೋಬೈಲನ್ನು ಹಾಜರುಪಡಿಸಿದ್ದು , ಅದನ್ನು ಪಂಚರಾದ ಚಾಸಾ-2 ಮತ್ತು 3 ರವರ ಸಮಕ್ಷಮ ಮಧ್ಯಾಹ್ನ 3-15 ರಿಂದ 4-00 ಗಂಟೆ ವರೆಗೆ ಪಂಚನಾಮೆ ಅಡಿ ಜಪ್ತಿ ಮಾಡಿ , ಫೋಟೋ ತೆಗೆಸಿರುತ್ತೇನೆ.

ಸಾಕ್ಷಿ ನಿಪಿ.2 ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ

ಸಹಿಯನ್ನು ನಿಪಿ.2(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.3 ಫೋಟೋ ನೋಡಿ ಗುರುಸಿರುತ್ತಾರೆ. ಆ ದಿನ ಜಪ್ತಿ ಮಾಡಿದ ಮೋಬೈಲನ್ನು ಒಂದು ರಟ್ಟಿನ ಡಬ್ಬದಲ್ಲಿ ಹಾಕಿ, ಬಿಳಿ ಚಿಲದಲ್ಲಿ ಹಾಕಿ ಅರಗಿನ ಶೀಲ್ ಮಾಡಿ , ಪಂಚರು ಮತ್ತು ನನ್ನ ಸಹಿ ಇರುವ ಚೀಟಿಯನ್ನು ಅಂಟಿಸಿರುತ್ತೇನೆ. ಸಾಕ್ಷಿ ನಿಪಿ.4 ಮೋಬೈಲನ್ನು ನೋಡಿ ಗುರುತಿಸಿರುತ್ತಾರೆ.

ಮೋಬೈಲನ್ನು ಶೀಲ್ ಮಾಡುವ ಮೊದಲು ಪರಿಶೀಲಿಸಲಾಗಿ , ನನ್ನ ಸಾವಿಗೆ ಹಾಲಿನಡ್ಯೆರಿ ಸಿದ್ದಪ್ಪ ಕಾರಣ ಎಂಬ ವಿಡಿಯೋ ಮತ್ತು ಆಡಿಯೋ ಇದ್ದವು. ಸದರಿ ಮೋಬೈಲ್ ನಲ್ಲಿರುವ ಆಡಿಯೋ ಮತ್ತು ವಿಡಿಯೋವನ್ನು ಸಾಕ್ಷಿ ನೋಡಿ ಗುರುಸಿರುತ್ತಾರೆ.

ನಂತರ ಸಿಜಿ ಆಸ್ಪತ್ರೆಯ ಶವಗಾರಕ್ಕೆ ಭೇಟ್ಟಿ ಕೊಟ್ಟು, ಪಂಚರಾದ ಚಾಸಾ-7 ಮತ್ತು 8 ರವರ ಸಮಕ್ಷಮ ಸಂಜೆ 4-30 ರಿಂದ 6-00 ಗಂಟೆ ವರೆಗೆ ಶವ ತನಿಖೆ ಮಾಡಿರುತ್ತೇನೆ, ಫೋಟೋ ತೆಗೆಸಿರುತ್ತೇನೆ. ಶವ ತನಿಖೆ ಕಾಲಕ್ಕೆ ಹಾಜರಿದ್ದ ಸಾಕ್ಷಿದಾರರಾದ ಭೀಮಪ್ಪ ಮತ್ತು ಅರುಣ್ ಕುಮಾರ್ ರವರ ಹೇಳಿಕೆ ಪಡೆದಿರುತ್ತೆನೆ.

ಸಾಕ್ಷಿ ಶವ ತನಿಖಾ ವರದಿಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಶವ ತನಿಖಾ ವರದಿಯನ್ನು ಈಗಾಗಲೇ ನಿಪಿ.13 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.13(ಬಿ) ಎಂದು ಗುರುತಿಸಲಾಯಿತು. ನಿಪಿ.13 ರ ಕಾಲಕ್ಕೆ ತೆಗೆಸಿದ ಫೋಟೋವನ್ನು ಸಾಕ್ಷಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.14 ಎಂದು ಗುರುತಿಸಲಾಗಿದೆ.

ನಂತರ ನ್ಯಾಯಾಲಯಕ್ಕೆ ಪ್ರ.ವ.ವರದಿ ಸಲ್ಲಿಸಿದ ಸಿಬ್ಬಂದಿ ಚಾಸಾ-18 ರವರ ಹೇಳಿಕೆ ಪಡೆದಿರುತ್ತೇನೆ.

ದಿ.25-02-2022 ಕೃತ್ಯ ನಡೆದ ಸ್ಥಳಕ್ಕೆ ಭೇಟ್ಟಿ ಕೊಟ್ಟು, ಚಾಸಾ-4 ಮತ್ತು 5 ರವರನ್ನು ಪಂಚರಾಗಿ ಬರಮಾಡಿಕೊಂಡು ಸಾಕ್ಷಿ ಚಾಸಾ-13 ಮಂಜುನಾಥ ತೋರಿಸಿದ ಸ್ಥಳದಲ್ಲಿ ಸ್ಥಳ ಪಂಚನಾಮೆಯನ್ನು ಬೆಳಿಗ್ಗೆ 9-15 ರಿಂದ 10-15 ರ ವರೆಗೆ ಜರುಗಿಸಿ , ಫೋಟೋ ತೆಗೆಸಿರುತ್ತೇನೆ. ಪಂಚನಾಮೆ ಕಾಲಕ್ಕೆ ಮೃತನು ನೇಣು ಹಾಕಿಕೊಳ್ಳಲು ಉಪಯೋಗಿಸಿದ ಅಂಗಿಯ ಬಟ್ಟೆಯನ್ನು ಅಮಾನತ್ತು ಪಡಿಸಿಕೊಂಡು , ಬಿಳಿ ಬಟ್ಟೆ ಚೀಲದಲ್ಲಿ ಹಾಕಿ , ಬಾಯಿ ಕಟ್ಟಿ, ಅರಗಿನಿಂದ ಆರ್ ಪಿ ಎಸ್ ಶೀಲ್ ಹಾಕಿ , ನನ್ನ ಮತ್ತು ಪಂಚರ ಸಹಿ ಇರುವ ಚೀಟಿ ಅಂಟಿಸಿರುತ್ತೆನೆ.

ಸಾಕ್ಷಿ ಸದರಿ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ನಿಪಿ.6 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.6(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ ಗುರುತಿಸಿದ ಎರಡು ಫೋಟೋಗಳನ್ನು ಈಗಾಗಲೇ ನಿಪಿ.7 ಮತ್ತು 8 ಎಂದು ಗುರುತಿಸಲಾಗಿದೆ. ಸಾಕ್ಷಿ ಗುರುತಿಸಿದ ಮೃತನುನೇಣು ಹಾಕಿಕೊಳ್ಳಲು ಉಪಯೋಗಿಸಿದ ಬಟ್ಟೆಯನ್ನು ನೋಡಿ ಗುರುತಿಸಿದ್ದು, ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಗಿದೆ.

ನಂತರ ಸಾಕ್ಷಿದಾರರಾದ ಮಾಲಿಂಗಪ್ಪ, ಅಂಜನಪ್ಪ, ಮಂಜುನಾಥ ಮತ್ತು ಯಶೋದಮ್ಮ ರವರ ಹೇಳಿಕೆ ಪಡೆದಿರುತ್ತೇನೆ. ಚಾಸಾ-12 ರವರು ನನ್ನ ಮುಂದೆ ನಿಪಿ.5 ರಂತೆ ತಮ್ಮ ಹೇಳಿಕೆ ನೀಡಿರುತ್ತಾರೆ.

ದಿ.11-03-2022 ರಂದು ಅಮಾನತ್ತು ಪಡಿಸಿಕೊಂಡ ಮೃತನ ಮೋಬೈಲ್ ನಿಪಿ.4 ನ್ನು ಎಕ್ಸಟ್ರ್ಯಾಕ್ಟ ಮಾಡಿಕೊಡಲು ಚಾಸಾ-22 ರವರಿಗೆ ಮನವಿ ಸಲ್ಲಿಸಿರುತ್ತೇನೆ. ಅದರಂತೆ ಅವರು ನನ್ನ ಮತ್ತು ಪಂಚರ ಸಮಕ್ಷಮ ಮೋಬೈಲ್ ನ ಎಕ್ಸಟ್ರ್ಯಾಕ್ಟ ವರದಿ ತಯಾರಿಸಿ , ಪಂಚನಾಮೆ ಅಡಿ ಪುನಃ ಶೀಲ್ ಮಾಡಿ ನಮಗೆ ನೀಡಿರುತ್ತಾರೆ. ಚಾಸಾ-22 ರವರು ಮೋಬೈಲ್ ನ ಜೊತೆ ಒಂದು ಡಿವಿಡಿ ನೀಡಿರುತ್ತಾರೆ. ಆ ಡಿವಿಡಿ ಯನ್ನು ನೋಡಿದರೆ ಗುರುತಿಸುತ್ತೇನೆ. ಸದರಿ ಡಿವಿಡಿ , ನಿಪಿ.4 ಮೋಬೈಲನ್ನು , ಎಕ್ಸಟ್ರ್ಯಾಕ್ಟ ವರದಿಯನ್ನು ಹುಬ್ಬಳ್ಳಿಯ ಎಫ್ ಎಸ್ ಎಲ್ ಕಛೇರಿಗೆ ನೈಜತೆ ಬಗ್ಗೆ ವರದಿ ನೀಡುವಂತೆ ಮನವಿ ಸಲ್ಲಿಸಿರುತ್ತೇನೆ. ಅದೇ ದಿನ ಚಾಸಾ-15 ರವರ ಹೇಳಿಕೆ ಪಡೆದಿರುತ್ತೇನೆ. ಅವರು ನನ್ನ ಮುಂದೆ ನಿಪಿ.9 ರಂತೆ ತಮ್ಮ ಹೇಳಿಕೆ ನೀಡಿರುತ್ತಾರೆ. ಮೋಬೈಲ್ ನಲ್ಲಿ ಇದ್ದ ದೃಷ್ಯಾವಳಿ, ಡಿವಿಡಿಯಲ್ಲಿನ ಮತ್ತು ಪೆನ್ ಡ್ರೈವ್ ನಲ್ಲಿನ ದೃಷ್ಯಾವಳಿಗಳು ಒಂದಕ್ಕೊಂದು ಹೊಲಿಯಾಗುತ್ತಿರುತ್ತವೆ.

ಮುಂದುವರೆದ ತನಿಖೆಯನ್ನು ಚಾಸಾ-24 ರವರಿಗೆ ವಹಿಸಿರತ್ತೇನೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ದೂರು ನಿಡುವ ಸಮಯದಲ್ಲಿ ಫಿರ್ಯಾದಿ ಒಬ್ಬರೇ ಬಂದಿದ್ದರು. ದೂರನ್ನು ಹೊರಗಡೆ ಬರೆಸಿಕೊಂಡು ಬಂದಿದ್ದರು. ದೂರನ್ನು ಯಾರು ಬರೆದಿದ್ದರು ಎಂದು ನನಗೆ ಗೊತ್ತಿಲ್ಲ. ಆ ಬಗ್ಗೆ ನಾನೇನು ಪರಿಶೀಲನೆ ಮಾಡಿರುವುದಿಲ್ಲ. ನಾನು ದೂರು ಬರೆದವರನ್ನು

ವಿಚಾರಣೆ ಮಾಡಿರುವುದಿಲ್ಲ. ಮೋಬೈಲ್ ಯಾರಿಗೆ ಸಂಬಂಧಪಟ್ಟದ್ದು ಯಾರ ಹೆಸರಿನಲ್ಲಿದೆ ಎಂದು ನಾನು ತನಿಖೆ ಮಾಡಿಲ್ಲ. ಮೋಬೈಲ್ ಯಾರ ಹೆಸರಿಗೆ ಇದೆ ಎಂದು ಆ ನಂತರ ಸಹ ವಿಚಾರಣೆ ಮಾಡಿರುವುದಿಲ್ಲ , ಕಾರಣ ಅವಶ್ಯಕತೆ ಕಂಡು ಬಂದಿರುವುದಿಲ್ಲ. ಮೋಬೈಲ್ ಯಾರದು ಎಂದು ತನಿಖೆ ಮಾಡುವ ಅವಶ್ಯಕತೆ ಇರಲಿಲ್ಲ. ಅವಶ್ಯಕತೆ ಇರುವುದಿಲ್ಲ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಿದ್ದಪನೇ ಮೃತನ ಸಾವಿಗೆ ಕಾರಣ ಎಂದು ಹೇಳಿರುವ ನಿಪಿ.4 ರಲ್ಲಿನ ದೃಷ್ಯಗಳಿಗೆ ಮತ್ತು ಆಡಿಯೋ ಬಗ್ಗೆ ನಾನು ತನಿಖೆ ಮಾಡಿಲ್ಲ ಎನ್ನುವುದು ಸರಿಯಲ್ಲ. ದೂರುದಾರರಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಬೇರೆಯವರ ಮೋಬೈಲ್ ನಲ್ಲಿ ಮೃತನ ಆಡಿಯೋ ಮತ್ತು ವಿಡಿಯೋ ಸೃಷ್ಟಿಸಿ , ಆರೋಪಿಗೆ ತೊಂದರೆ ಕೊಡುವ ಉದ್ದೇಶದಿಂದ ಡಾಟಾ ಎಕ್ಸಟ್ರಾಕ್ ನ್ನು ಡಿವಿಡಿ ಗೆ ಮತ್ತು ಪೆನ್ ಡ್ರೈವ್ ಗೆ ಹಾಕಿಸಿ , ಸೃಷ್ಟಿಸಿ ನ್ಯಾಯಾಲಯಕ್ಕೆ ಸಲ್ಲಿಸಲಾಗಿದೆ ,ಅವರ ಮಾತನ್ನು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಿಪಿ.4 ರ ಬಗ್ಗೆ ತನಿಖೆ ಅವಶ್ಯಕತೆ ಇದ್ದರೂ ಸಹ ಅವಶ್ಯಕತೆ ಇಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫೋಟೋಗಳನ್ನು ಯಾರು ತೆಗೆದರು ಎನ್ನುವ ಬಗ್ಗೆ ಅವರಿಂದ ಕಲಂ.65(ಬಿ) ಪ್ರಮಾಣಪತ್ರ ಪಡೆದಿರುವುದಿಲ್ಲ.. ಸಾಕ್ಷಿದಾರರು ಯಾವುದೇ ಹೇಳಿಕೆ ನೀಡಿಲ್ಲ ಎನ್ನುವುದು ಸರಿಯಲ್ಲ. ಶವ ತನಿಖಾ ವರದಿ , ಸಾಕ್ಷಿದಾರರ ಹೇಳಿಕೆ ಗಳನ್ನು ಫಿರ್ಯಾದಿಗೆ ಅನುಕೂಲವಾಗವ ರೀತಿ ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ. ಚಾಸಾ-24 ರವರಿಗೆ ಕಡತ ವರ್ಗಾಯಿಸುವ ಸಮಯದಲ್ಲಿ ಸಂಪೂರ್ಣ ತನಿಖೆ ಮುಗಿಸಿದ್ದೆ ಎನ್ನುವುದು ಸರಿಯಲ್ಲ. ಸಂಪೂರ್ಣ ತನಿಖೆ ಮುಗಿಸಿದ್ದರೂ ಸಹ ಮುಗಿಸಿರಲಿಲ್ಲ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫಿರ್ಯಾದಿಗೆ ಅನುಕೂಲವಾಗುವಂತೆ ದಾಖಲೆಗಳನ್ನು ಸೃಷ್ಟಿಸಿ ಸುಳ್ಳು ಸಾಕ್ಷಿ ಹೇಳುತ್ತಿದೇನೆ ಎನ್ನುವುದು ಸರಿಯಲ್ಲ. ಸಿಇಎನ್ ಪ ಪೊಲೀಸ್ ಠಾಣೆಗೆ ಕರೆದುಕೊಂಡು ಹೋದ ಪಂಚರಿಗೆ ನೋಟೀಸು ಕೊಟ್ಟು ಕರೆದುಕೊಂಡು ಹೊಗಿದ್ದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಫಿರ್ಯಾದಿ ಕರೆದುಕೊಂಡು ಬಂದವರನ್ನು ಪಂಚರಾಗಿ ಕರೆದುಕೊಂಡು ಹೋಗಿ, ಸುಳ್ಳು ವರದಿ ತಯಾರಿಸಿದ್ದೇನೆ ಎನ್ನುವುದು ಸರಿಯಲ್ಲ.

ನಾನು ಮಾರನೇ ದಿನವೇ ಸ್ಥಳಕ್ಕೆ ಹೋಗಿದ್ದೆ. ನಾವು ಸ್ಥಳಕ್ಕೆ ಹೋದ ನಂತರ ಮೃತ ನೇಣುಹಾಕಿಕೊಳ್ಳಲು ಉಪಯೋಗಿಸಿದ ಬಟ್ಟೆಯನ್ನು ಬಿಚ್ಚಿಸಿದ್ದೇನೆ. ಮು.ಮಾ.1 ರಂತಹ ಬಟ್ಟೆ ಎಲ್ಲರ ಮನೆಯಲ್ಲಿರುತ್ತವೆ ಎನ್ನುವುದು ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ನಿಪಿ.8 ರಲ್ಲಿ ಯಾವುದೇ ಗಂಟು ಕಾಣುತ್ತಿಲ್ಲ ಎನ್ನುವುದು ಸರಿ. ಸಾಕ್ಷಿ ಮುಂದುವರೆದು ಮನೆಯವರು ಇನ್ನು ಬದುಕಿರಬಹುದು ಎಂದು ಆಸ್ಪತ್ರೆಗೆ ತೆಗೆದುಕೊಂಡು ಹೋಗುವ ಉದ್ದೇಶದಿಂದ ಗಂಟನ್ನು ಬಿಚ್ಚಿರುತ್ತಾರೆ ಎಂದು ಸಾಕ್ಷಿ ನುಡಿದಿರುತ್ತಾರೆ. ನಿಪಿ.7 ಮತ್ತು 8 ರ ಫೋಟೋದಲ್ಲಿ ಗಂಟು ಬಿಚ್ಚಿರುವ ಕುರುಹು ಕಾಣುತ್ತಿಲ್ಲ ಎನ್ನುವುದು ಸರಿಯಲ್ಲ. ಆ ರೀತಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮೃತನು ತನ್ನ ವೈಯಕ್ತಿಕ ಕಾರಣಕ್ಕೆ ನೇಣುಹಾಕಿಕೊಂಡು ಮೃತಪಟ್ಟಿದ್ದಾನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.9/2023</u>

PW- 11

CW- 22

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಜೋವಿತ್ ರಾಜ್ |
| ತಂದೆ/ಗಂಡನ ಹೆಸರು | : | ವಿಜಯರಾಜ್ |
| ವಯಸ್ಸು | : | 56 ವರ್ಷ |
| ಉದ್ಯೋಗ | : | ಪಿಎಸ್ಐ , ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆ |
| ವಾಸ | : | ದಾವಣಗೆರೆ |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ದಿ.21-12-2021 ರಿಂದ ಜುಲೈ-2023 ರ ವರೆಗ ನಾನು ದಾವಣಗೆರೆ ಸಿಇಎನ್ ಪೊಲೀಸ್ ಠಾಣೆಯಲ್ಲಿ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.11-03-2022 ರಂದು ಚಾಸಾ-23 ರವರು ನಮ್ಮ ಠಾಣೆಗೆ ಪಂಚರ ಸಮಕ್ಷಮ ಠಾಣೆಗೆ ಬಂದು ಮೋಬೈಲ್ ನಲ್ಲಿದ್ದ ಆಡಿಯೋ ಮತ್ತು ವಿಡಿಯೋವನ್ನು ಈ ಪ್ರಕರಣಕ್ಕೆ ಸಂಬಂಧಿಸಿದಂತೆ ಎಕ್ಸಟ್ರ್ಯಾಕ್ಟ ಮಾಡಿಕೊಡಲು ಕೋರಿದ್ದು , ಅದರಂತೆ ಚಾಸಾ-6 ಮತ್ತು 7 ರವರ ಸಮಕ್ಷಮ ಚಾಸಾ-23 ರವರು ನೀಡಿದ ಮೋಬೈಲ್ ನ್ನು ಪಂಚರ ಸಮಕ್ಷಮ ಶೀಲ್ ಬಿಚ್ಚಿ ನೋಡಲಾಗಿ - ವಿವೋ ಕಂಪನಿಯ ವೈ-20, ವಿ-2029 ಮೋಬೈಲ್ ಆಗಿದ್ದು , ಇದರ ಎಕ್ಸಟ್ರ್ಯಾಕ್ಟ್ ಮಾಡಿಕೊಡಲು ಚಾಸಾ-20 ರವರ ಮೂಲಕ ಲ್ಯಾಬ್ ನಲ್ಲಿ ಎಕ್ಸಟ್ರ್ಯಾಕ್ಟ ಮಾಢಿ ಚಾಸಾ-23 ರವರು ಕೋರಿದಂತೆ ಮೂರು ಡಿವಿಡಿಗೆ ವರ್ಗಾಯಿಸಿ ನೀಡಿರುತ್ತೇನೆ. ಮಹಜರ್ ನ್ನು ಆ ದಿನ ಮುಂಜನೆ 11-30 ರಿಂದ ಮಧ್ಯಾಹ್ನ 01-00 ರ ವರೆಗೆ ಮಾಡಿದ್ದಾರೆ. ಆ ಸಮಯದಲ್ಲಿ ವಿಡಿಯೋ ಮತ್ತು ಸ್ಕ್ರಿನ್ ಶಾಟ್ ನ್ನು ಡಿವಿಡಿ.ಗೆ ವರ್ಗಾಯಿಸಿ, ಗ್ರಾಮಾಂತರ ಪೊಲೀಸ್ ಠಾಣೆಗೆ ಶೀಲ್ ಮಾಡಿ ಕಳುಹಿಸಿರುತ್ತೇನೆ.

ಪಂಚನಾಮೆನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.10 ಎಂದು ಗುರುತಿಸಲಾಗಿದೆ. ಸಾಕ್ಷಿಯ ಸಹಿಯನ್ನು ನಿಪಿ.10(ಸಿ) ಎಂದು ಗುರುತಿಸಲಾಯಿತು. ಸಾಕ್ಷಿ

ನಿಪಿ.11 ಮತ್ತು 12 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ಮೋಬೈಲನ್ನು ನೋಡುತ್ತಿದ್ದು ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಸಾಕ್ಷಿ ಮೋಬೈಲ್ನಲ್ಲಿರುವ ಆಡಿಯೋ ಮತ್ತು ವಿಡಿಯೋವನ್ನು ನೋಡಿ ಗುರುತಿಸಿರುತ್ತಾರೆ. ಸದರಿ ದೃಷ್ಯಾವಳಿಯಲ್ಲಿ ಮತ್ತು ಆಡಿಯೋದಲ್ಲಿ ಮೃತನು ನನ್ನ ಸಾವಿಗೆ ಸಿದ್ದಪ್ಪ ಆರೋಪಿಯೇ ಕಾರಣ ಎಂದು ಹೇಳಿರುತ್ತಾರೆ. ಪೆನ್ ಡ್ರೈವ್ ನಲ್ಲಿ ಎರಡು ವಿಡಿಯೋ, ನಾಲ್ಕುಸ್ಕ್ರೀನ್ ಶಾಟ್ ಇವೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ. ಪೆನ್ ಡ್ರೈವನ್ನು ಈಗಾಗಲೇ ನಿಪಿ.15 ಎಂದು ಗುರುತಿಸಲಾಗಿದೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನಿಪಿ.4 ಮೋಬೈಲ್ ನಲ್ಲಿನ ಡಾಟಾ ವನ್ನು ಎಕ್ಸಟ್ರ್ಯಾಕ್ಟ ಮಾಡಿ ಕೊಡಲು ಚಾಸಾ-23 ರವರು ಲಿಖಿತವಾಗಿ ಮನವಿ ಮಾಡಿದ್ದರು. ಸದರಿ ಮನವಿಯನ್ನು ನಾನು ನ್ಯಾಯಾಲಯಕ್ಕೆ ಸಲ್ಲಿಸಿರುವುದಿಲ್ಲ. ನಾನು ಆ ರೀತಿ ಎಕ್ಸಟ್ರ್ಯಾಕ್ಟ ಮಾಡಿದ ಬಗ್ಗೆ ಲಿಖಿತವಾಗಿ ಯಾವುದೇ ಮಾಹಿತಿ ನೀಡಿರುವುದಿಲ್ಲ. ಬೆಳಿಗ್ಗೆ 11-30 ಕ್ಕೆ ನಮ್ಮ ಠಾಣೆಗೆ ಇಬ್ಬರು ಪಂಚರು ಮತ್ತು ಎಎಸ್ಐ ಬಂದಿದ್ದರು. ಬೆಳಿಗ್ಗೆ 11-38 ರಿಂದ ಮಧ್ಯಾಹ್ನ 12-38 ರ ವರೆಗೆ ಡಾಟಾ ವರ್ಗಾವಣೆಯ ಕಾರ್ಯ ಮಾಡಿರುತ್ತೇವೆ. ಎಕ್ಸಟ್ರ್ಯಾಕ್ಟ ಮಾಡುವ ಮೊದಲು ಪಂಚನಾಮೆ ಮಾಡಿಲ್ಲ. ಗ್ರಾಮಾಂತರ ಪೊಲೀಸರೇ ಪಂಚರನ್ನು ಕರೆದುಕೊಂಡು ಬಂದಿದ್ದರು. ನಾನು ನೋಟೀಸು ಕೊಟ್ಟು ಕರೆಸಿಲ್ಲ.

ದೃಷ್ಯಾವಳಿ ಮರದ ಕೆಳಗಡೆಹೊರಗಡೆ ಇವೆ ಎಂದರೆ ಸಾಕ್ಷಿ , ದೃಷ್ಯಾವಳಿ ಮರದ ಕೆಳಗೆ ಇದೆ ಎಂದು ನುಡಿದಿರುತ್ತಾರೆ. ಸದರಿ ದೃಷ್ಯಾವಳಿಯನ್ನು ಈ ಕೇಸಿಗಾಗಿ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಗ್ರಾಮಾಂತರ ಪೊಲೀಸರ ಮನವಿ ಮೇರೆಗೆ ನಿಪಿ.4 ರ ಮೊಬೈಲ್ ಡಾಟಾದ ದೃಷ್ಯಾವಳಿಯನ್ನು ಸೃಷ್ಟಿಸಿ ಡಿವಿಡಿಗೆ ವರ್ಗಾಯಿಸಿ ಹಾಕಿದ್ದೆವೆ ಎನ್ನುವುದು ಸರಿಯಲ್ಲ. ಮೃತನ ಸಾವಿಗೆ ಆರೋಪಿ ಕಾರಣನಲ್ಲ ಎನ್ನುವುದು ಸರಿಯಲ್ಲ. ಗ್ರಾಮಾಂತರ ಪೊಲೀಸರು ಪಂಚನಾಮೆ ಮಾಡಿದ್ದಾರೆ ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಕೇಸಿಗೆ ಅನುಕೂಲವಾಗುವ ರೀತಿ ಮಾಡಿಕೊಂಡು ನನ್ನಿಂದ ಈ ರೀತಿ ಸಾಕ್ಷಿ ನುಡಿಸುತ್ತಿದ್ದಾರೆ ಎನ್ನುವುದು ಸರಿಯಲ್ಲ. ದೃಷ್ಯಾವಳಿಗಳನ್ನು ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಮೃತನ ಧ್ವನಿಯನ್ನು ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ನಿಪಿ.4 ಮೃತನ ಮೊಬೈಲ್ ಅಲ್ಲ ಎನ್ನುವುದು ಸರಿಯಲ್ಲ. ಗ್ರಾಮಾಂತರ ಪೊಲೀಸರ ಕೋರಿಕೆ ಮೇರೆಗೆ

ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ದೃಷ್ಯಾವಳಿಗಳು ಈ ಪ್ರಕರಣಕ್ಕೆ ಸಂಬಂಧಿಸಿದ್ದವುಗಳಲ್ಲ ಎನ್ನುವುದು ಸರಿಯಲ್ಲ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.9/2023</u>

PW- 10

CW- 20

ಪ್ರ. ಬೋ. ದಿನಾಂಕಃ 04-01-2024

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಉಮೇಶ್ |
| ತಂದೆ/ಗಂಡನ ಹೆಸರು | : | ರೇವಣಸಿದ್ದಪ್ಪ |
| ವಯಸ್ಸು | : | 43 ವರ್ಷ |
| ಉದ್ಯೋಗ | : | ಪೊಲೀಸ್ ಪೇದೆ-10, ಸಿಇಎನ್ ಪೊಲೀಸ್ ಠಾಣೆ |
| ವಾಸ | : | ದಾವಣಗೆರೆ |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಕಳೆ ಮೂರು ವರ್ಷಗಳಿಂದ ನಾನು ಮೇಲ್ಕಂಡಂತೆ ಕರ್ತವ್ಯ ನಿರ್ವಹಿಸಿರುತ್ತೇನೆ.

ದಿ.11-03-2022 ರಂದು ಚಾಸಾ-22 ರ ವರರ ಆದೇಶದ ಮೇರೆಗೆ ಈ ಪ್ರಕರಣದಲ್ಲಿ ಅಮಾನತ್ತುಪಡಿಸಿಕೊಂಡ ಮೋಬೈಲ್ ನಲ್ಲಿದ್ದ ಆಡಿಯೋ ಮತ್ತು ವಿಡಿಯೋವನ್ನು ಎಕ್ಸಟ್ರಾಕ್ಟ ಮಾಡಿ , ಡಿವಿಡಿ ಗೆ ವರ್ಗಾವಣೆ ಮಾಡಿ ನೀಡಿರುತ್ತೇನೆ. ಆ ಸಮಯದಲ್ಲಿ ಪಂಚರ ಸಮಕ್ಷಮ ಪಂಚನಾಮೆ ಮಾಡಿದ್ದಾರೆ.

ಸಾಕ್ಷಿ ನಿಪಿ.10 ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ.10(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.11 ಮತ್ತು 12 ಫೋಟೋಗಳನ್ನು ನೋಡಿ ಗುರುತಿಸಿರುತ್ತಾರೆ. ನಾನು ಎಕ್ಸಟ್ರ್ಯಾಕ್ಟ್ ಮಾಡಿದ ಮೋಬೈಲನ್ನು ನೋಡುತ್ತಿದ್ದು , ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ. ಆ ದಿನ ಎಕ್ಸಟ್ರಾಕ್ಟ ಮಾಡಿದ ವಿಡಿಯೋ ಪೆನ್ ಡ್ರೆವ್ ನಲ್ಲಿ ಇದ್ದು , ಅದನ್ನು ಪ್ಲೇ ಮಾಡಿ ನೋಡಿ ಸಾಕ್ಷಿ ಗುರುತಿಸಿರುತ್ತಾರೆ. ಪೆನ್ ಡ್ರೈವನ್ನು ನಿಪಿ.15 ಎಂದು ಗುರುತಿಸಲಾಯಿತು. ಸದರಿ ದೃಷ್ಯಾವಳಿಯಲ್ಲಿ ಮತ್ತು ಆಡಿಯೋದಲ್ಲಿ ಮೃತನು ನನ್ನ ಸಾವಿಗೆ ಸಿದ್ದಪ್ಪ ಆರೋಪಿಯೇ ಕಾರಣ ಎಂದು ಹೇಳಿರುತ್ತಾರೆ. ಸದರಿ ಪೆನ್ ಡ್ರೈವ್ ನಲ್ಲಿ ಎರಡು ವಿಡಿಯೋ, ನಾಲ್ಕುಸ್ಕ್ರೀನ್ ಶಾಟ್ ಇವೆ ಎಂದು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಚಾಸಾ-22 ರವರು ನನಗೆ ಮೌಖಿಕವಾಗಿ ಮೋಬೈಲ್ ಎಕ್ಸಟ್ರ್ಯಾಕ್ಟ ಮಾಡಿ ಎಂದು ಹೇಳಿದ್ದರು , ಆದರೆ ಲಿಖಿತಾಗಿ ಹೇಳಿರಲಿಲ್ಲ. ದಾವಣಗೆರೆ ರೂರಲ್ ಪೊಲೀಸ್ ಠಾಣೆಗೆ ಸಂಬಂಧಿಸಿದ ಪ್ರಕರಣದ ಮಾಹಿತಿ ಎಂದು ತಿಳಿಸಿದ್ದರಿಂದ ಕೇವಲ ಮೌಖಿಕವಾಗಿ ನಿರ್ದೇಶನ ನೀಡಿರುತ್ತಾರೆ. ದೃಷ್ಯಾವಳಿ ಮರದ ಕೆಳಗಡೆ ಇದೆ ಎನ್ನುವುದು ಸರಿ. ಮೃತನು ತನ್ನ ಸಾವಿಗೆ ಆರೋಪಿ ಸಿದ್ದಪ್ಪ ಕಾರಣ ಎಂದು ಹೇಳಿಲ್ಲ ಎನ್ನುವುದು ಸರಿಯಲ್ಲ. ಸಿದ್ದಪ್ಪನನ್ನು ಈ ಪ್ರಕರಣದಲ್ಲಿ ಸಿಲುಕಿಸಲು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಮೃತನ ಸಾವಿಗೆ ಕಾರಣನಲ್ಲ ಎನ್ನುವುದು ಸರಿಯಲ್ಲ. ಪೆನ್ ಡ್ರೈವ್ ನಲ್ಲಿರುವ ವಿಡಿಯೋ ದೃಷ್ಯಾವಳಿಯನ್ನು ಈ ಕೇಸಿಗಾಗಿ ಸೃಷ್ಟಿಸಲಾದೆ ಎನ್ನುವುದು ಸರಿಯಲ್ಲ. ರೂರಲ್ ಪೊಲೀಸರಿಗೆ ಸಹಾಯ ಮಾಡಲು ಸುಳ್ಳುಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಬೇಕಾದವರನ್ನು ಕರೆದುಕೊಂಡು ಬಂದು ನನ್ನ ಸಮಕ್ಷಮ ಪಂಚನಾಮೆ ಮಾಡಿಸಿದ್ದಾರೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ:-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.9/2023</u>

PW- 09

CW- 08

ಪ್ರ. ಬೋ. ದಿನಾಂಕಃ 29-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಹುಲಿಗೇಶ್ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 45 ವರ್ಷ |
| ಉದ್ಯೋಗ | : | ಮಿಕ್ಸಿ ರಿಪೇರಿ ಕೆಲಸ |
| ವಾಸ | : | ಶಿವಪುರ, ದಾವಣಗೆರೆ ತಾ. |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಹನುಮಂತಪ್ಪನ ಮಕ್ಕಳಾದ ನಾಗರಾಜ ಮತ್ತು ಯುವರಾಜ ನನಗೆ ಗೊತ್ತು. ಯುವರಾಜ ನನ್ನ ಚಿಕ್ಕದೊಡ್ಡಪ್ಪನ ಅಣ್ಣನ ಮಗ.

ಯುವರಾಜ ನೇಣು ಹಾಕಿಕೊಂಡು ಮೃತಪಟ್ಟಿದ್ದಾನೆ. ಆತನ ಹೆಣವನ್ನು ಆಸ್ಪತೆರಯಲ್ಲಿ ನೋಡಿದ್ದೇನೆ. ಕುತ್ತಿಗೆಯಲ್ಲಿ ಉರುಳು ಹಾಕಿಕೊಂಡಿದ್ದ ಗುರುತು ಇತ್ತು. ಆ ಸಮಯದಲ್ಲಿ ಮೃತನ ಅಣ್ಣ ಮತ್ತು ಊರಿನ ಇತರೆ ಜನರು ಇದ್ದರು.

ಯುವರಾಜ ಉಷಾ ಎನ್ನುವವರ ಮನೆಗೆ ಹೋಗಿದ್ದ ಕಾರಣಕ್ಕೆ ಆರೋಪಿ ಆತನಿಗೆ ಹೆದರಿಸುತ್ತಿದ್ದ ಎಂದು ಆತ ನೇಣು ಹಾಕಿಕೊಂಡಿರುತ್ತಾನೆ.

ಸಾಕ್ಷಿ ಶವ ಪಂಚನಾಮೆಯಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಅದನ್ನು ನಿಪಿ.13 ಎಂದು , ಸಾಕ್ಷಿಯ ಸಹಿಯನ್ನು ನಿಪಿ.13(ಎ) ಎಂದು ಗುರುತಿಸಲಾಯಿತು. ಸಾಕ್ಷಿ ನೋಡಿ ಗುರುತಿಸಿದ ಫೋಟೋವನ್ನು ನಿಪಿ.14 ಎಂದು ಗುರುತಿಸಲಾಯಿತು.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನನಗೆ ನಾಗರಾಜ ಮತ್ತು ಯುವರಾಜ ನನ್ನ ಸಂಬಂಧಿಕರು ಎನ್ನುವುದು ಸರಿ.

ಆಸ್ಪತ್ರೆಯಲ್ಲಿದ್ದವರಲ್ಲಿ ಕೆಲವರು ನನ್ನ ಸಂಬಂಧಿಕರಾಗಿರುತ್ತಾರೆ.

ಯುವರಾಜ ನನ್ನ ಸಾವಿಗೆ ಇಂತಹವರು ಕಾರಣ ಎಂದು ನನ್ನ ಮುಂದೆ ಹೇಳಿಲ್ಲ. ನಾವು ಬೆಳಿಗ್ಗೆ 9-00 ಗಂಟೆಗೆ ಆಸ್ಪತ್ರೆಗೆ ಹೋಗಿದ್ದೇವು. ಮಧ್ಯಾಹ್ನ 2-00 ಗಂಟೆಯಿಂದ 3-00 ಗಂಟೆ ವರೆಗೆ ಮಹಜರ್ ಮಾಡಿದ್ದಾರೆ.

ಮೃತ ನನ್ನ ಸಂಬಂಧಿಯಾಗಿರುವುದರಿಂದ ಆರೋಪಿ ಮೃತನಿಗೆ ಹೆದರಿಸಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ನನಗೆ ವಿಡಿಯೋ ಮತ್ತು ಆಡಿಯೋ ತೋರಿಸಿದ್ದಾರೆ , ಕೇಳಿಸಿದ್ದಾರೆ ಎಂದು ಮುಂದುವರೆದು ನುಡಿಯುತ್ತಾರೆ. ವಿಡಿಯೋ ಮತ್ತು ಆಡಿಯೋವನ್ನು ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ. ಆ ರೀತಿ ವಿಡಿಯೋ ಮಾಡಿರಲಿಲ್ಲ ಎನ್ನುವುದು ಸರಿಯಲ್ಲ. ಮೃತ ಯುವರಾಜ ಮತ್ತು ನಾಗರಾಜ ನನಗೆ ಸಂಬಂಧಿಕರಾದ ಕಾರಣ ಫಿರ್ಯಾದಿಗೆ ಸಹಾಯ ಮಾಡಲು ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 08

CW- 03

ಪ್ರ. ಬೋ. ದಿನಾಂಕಃ 28-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಎಂ ಎಸ್ ಕೃಷ್ಣಮೂರ್ತಿ |
| ತಂದೆ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 58 ವರ್ಷ |
| ಉದ್ಯೋಗ | : | ವ್ಯವಸಾಯ, |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-1 ನನ್ನ ಚಕ್ಕಮ್ಮನ ಮಗ , ಚಾಸಾ-2 ನನಗೆ ಅಣ್ಣನಾಗಬೇಕು. ಮೃತ ಯುವರಾಜ ನನ್ನ ತಮ್ಮನ ಮಗ . ಆತ ನೇಣುಹಾಕಿಕೊಂಡು ಸತ್ತಿದ್ದಾನೆ.

ನನ್ನನ್ನು ಮತ್ತು ಇತರರನ್ನು ಪೊಲೀಸರು ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಗೆ ಕರೆಸಿದ್ದರು. ಅಲ್ಲಿ ನಾಗರಾಜ ಪೊಲೀಸರ ವಶಕ್ಕೆ ಮೋಬೈಲ್ ನೀಡಿರುತ್ತಾನೆ. ಮೋಬೈಲ್ ನಲ್ಲಿ ನನ್ನ ಸಾವಿಗೆ ಹಾಲಿನಡೈರಿ ಸಿದ್ದಪ್ಪ ಕಾರಣ ಎಂದು ಮೋಬೈಲ್ ನಲ್ಲಿ ತೋರಿಸಿದ್ದಾರೆ. ಪೊಲೀಸರು ಮೋಬೈಲ್ ಫೋನ್ ತೆಗೆದುಕೊಂಡು ಫೋಟೋ ಹೊಡೆದುಕೊಂಡು , ಮಹಜರ್ ಬರೆದು , ಸಹಿ ಪಡೆದಿದ್ದಾರೆ.

ಸಾಕ್ಷಿ ನಿಪಿ.2 ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ.2(ಬಿ) ಎಂದು ಗುರುತಿಸಲಾಯಿತು. ಸಾಕ್ಷಿ ನಿಪಿ.3 ಫೋಟೋ ನೋಡಿ ಗುರುತಿಸಿರುತ್ತಾರೆ. ಸಾಕ್ಷಿ ನಿಪಿ.4 ಮೋಬೈಲ್ ನೋಡಿ ಗುರುತಿಸಿರುತ್ತಾರೆ.

ಆ ದಿನ ಠಾಣೆಯಲ್ಲಿ ಮೋಬೈಲ್ ನಲ್ಲಿ ತೋರಿಸಿದ ವಿಡಿಯೋ ಮತ್ತು ಕೇಳಿಸಿದ ಆಡಿಯೋ ನೋಡಿದರೆ ಮತ್ತು ಕೇಳಿದರೆ ಗುರುತಿಸುತ್ತೇನೆ. ಸಾಕ್ಷಿ ಮೋಬೈಲ್ ನಲ್ಲಿರುವ ಮೃತನ ಸಂಭಾಷಣೆಯನ್ನು ಕೇಳಿಸಿಕೊಂಡು ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಶಿವಪುರದಿಂದ ಪೊಲೀಸ್ ಠಾಣೆಗೆ ಹೋಗಿ ನಾವು ಮೋಬೈಲ್ ಕೊಟ್ಟಿರುತ್ತೇವೆ. ಪೊಲೀಸ್ ಠಾಣೆಗೆ ಹೋದ ಸಮಯ ಹೇಳಲು ಈಗ ನೆನಪಿರುವುದಿಲ್ಲ. ಆ ದಿನದ ವಾರ ಯಾವುದು ಎಂದು ಹೇಳಲು ನೆನಪಿರುವುದಿಲ್ಲ. ಠಾಣೆಗೆ ಊರಿನ ಸುಮಾರು 50 ರಿಂದ 60 ಜನ ಹೋಗಿದ್ದೇವು. ಪೊಲೀಸರು ನಾಲ್ಕು ಜನರನ್ನು ಮಾತ್ರ ಮಹಜರ್ ಗೆ ತೆಗೆದುಕೊಂಡಿದ್ದಾರೆ. ಫೋಟೋದಲ್ಲಿ ಮೂರರಿಂದ ನಾಲ್ಕು ಜನ ಇದ್ದೇವೆ. ಮೊದಲು ನಾನು ಮಹಜರ್ ಗೆ ಸಹಿ ಮಾಡಿದ್ದೇನೆ. ನಾನು, ಮಂಜುನಾಥ ಮತ್ತು ಇತರರು ಸೇರಿ ಮೋಬೈಲ್ ನಲ್ಲಿರುವ ದೃಷ್ಯವನ್ನು ಮತ್ತು ಸಂಭಾಷಣೆಯನ್ನು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಮೋಬೈಲ್ ನಲ್ಲಿರು ಸಂಭಾಷಣೆ ಮೃತ ಯುವರಾಜನ ಸಂಭಾಷಣೆ ಎನ್ನುವುದು ಸರಿಯಲ್ಲ. ಆರೋಪಿಯನ್ನು ವೈಯಕ್ತಿಕ ಕಾರಣಕ್ಕಾಗಿ ಸಿಕ್ಕಿಸಬೇಕು ಎಂದು ನಾವು ಸೃಷ್ಟಿ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಸದರಿ ಮೋಬೈಲ್ ಯಾವ ಕಂಪನಿಯದು , ಎಷ್ಟು ವರ್ಷದ್ದು ಎಂದು ಹೇಳಲು ಆಗುವುದಿಲ್ಲ. ಮೃತ ಯುವರಾಜ ಮತ್ತು ಆತನ ಅಣ್ಣ ಒಂದೇ ದಿನ ಮೋಬೈಲ್ ಖರೀದಿ ಮಾಡಿದ್ದರು. ಮೋಬೈಲ್ ನ ರಸೀದಿಯನ್ನು ಹಾಜರುಪಡಿಸಿಲ್ಲ. ಮೋಬೈಲ್ ಬಾಕ್ಸನ್ನು ಪೊಲೀಸರ ಮುಂದೆ ಹಾಜರುಪಡಿಸಿಲ್ಲ. ಯಾವ ಕಂಪನಿಯ ಸಿಮ್ ಮೋಬೈಲ್ ನಲ್ಲಿ ಇತ್ತು ಎನ್ನುವುದು ನನಗೆ ಗೊತ್ತಿಲ್ಲ. ಫಿರ್ಯಾದಿಯ ಮಾತು ಕೇಳಿ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಮೃತ ಯುವರಾಜ ಯಾವುದೇರೀತಿಯ ಸಂಭಾಶಣೆ ದಾಖಲು ಮಾಡಿಲ್ಲ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 07

CW- 07

ಪ್ರ. ಬೋ. ದಿನಾಂಕಃ 28-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮಂಜಪ್ಪ |
| ತಂದೆ/ಗಂಡನ ಹೆಸರು | : | ಸಿದ್ದಪ್ಪ |
| ವಯಸ್ಸು | : | 42 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-6 ಭೀಮಪ್ಪ ನನಗೆ ಗೊತ್ತು.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಅದನ್ನು ನಿಪಿ.10 ಎಂದು, ಸಾಕ್ಷಿಯ ಸಹಿಯನ್ನು ನಿಪಿ.10(ಎ) ಎಂದು ಗುರುತಿಸಲಾಯಿತು. ದಿ.24-02-2022 ರಂದು ಪೊಲೀಸರು ನನ್ನನ್ನು ಬೈಪಾಸ್ ಹತ್ತಿರ ಇರುವ ಪೊಲೀಸ್ ಠಾಣೆಗೆ ಕರೆಸಿದ್ದರು. ಪೊಲೀಸ್ ಠಾಣೆಯಲ್ಲಿದ್ದ ಬಾಕ್ಸನಲ್ಲಿದ್ದ ಮೋಬೈಲನ್ನು ತೆಗೆದು, ಮೂರು ಡಿವಿಡಿಗಳನ್ನು ಮಾಡಿ , ಮೋಬೈಲ್ ನಲ್ಲಿದ್ದ ಸಂಭಾಷಣೆಯನ್ನು ಡಿವಿಡಿ ಗೆ ವರ್ಗಾಯಿಸಿ , ನನ್ನ ಸಹಿ ಪಡೆದಿದ್ದಾರೆ. ಆ ಸಮಯದಲ್ಲಿ ಫೋಟೋ ತೆಗೆಸಿರುತ್ತಾರೆ. ಸಾಕ್ಷಿ ಫೋಟೋಗಳನ್ನು ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.11 ಮತ್ತು 12 ಎಂದು ಗುರುತಿಸಲಾಯಿತು. ಆ ದಿನ ತೋರಿಸಿದ ಮೋಬೈಲನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅದನ್ನು ಈಗಾಗಲೇ ನಿಪಿ.4 ಎಂದು ಗುರುತಿಸಲಾಗಿದೆ.

ಪಾಟೀಸವಾಲುಃ- ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಮೃತ ಯುವರಾಜ ನನಗೆ ತಮ್ಮನಾಗಬೇಕು. ಮಂಜುನಾಥನ ನನಗೆ ತಮ್ಮನಾಗಬೇಕು. ಯಶೋಧಮ್ಮ ನನಗೆ ಚಿಕ್ಕಮ್ಮನಾಗಬೇಕು. ಆ ದಿನ ನಾನು ಊರಲ್ಲಿ

ಇದ್ದೆ. ಪೊಲೀಸರೇ ನಮಗೆ ಠಾಣೆಗೆ ಬರಲು ಹೇಳಿದ್ದರು. ಪೊಲೀಸರು ನೋಟೀಸನ್ನು ಕೊಟ್ಟಿರಲಿಲ್ಲ. ಪೊಲೀಸ್ ಠಾಣೆಗೆ ನಾನು ಮತ್ತು ಭೀಮಪ್ಪ ಇಬ್ಬರೂ ಹೋಗಿದ್ದೇವು. ನಾವು 12-30 ಗಂಟೆಯಿಂದ 4-00 ಗಂಟೆ ವರೆಗೆ ಇದ್ದೇವು. ಪ್ಯಾಕ್ ಮಾಡಿ ಎಲ್ಲಿಗೆ ಕಳುಹಿಸಿದರು ಗೊತ್ತಿಲ್ಲ. ನಾನು ಒಂದೇ ಪೇಪರ್ ಗೆ ಸಹಿ ಮಾಡಿರುತ್ತೇನೆ. ಪೊಲೀಸರು ಸಹಿ ಮಾಡು ಎಂದು ಹೇಳಿದ್ದರಿಂದ ಸಹಿ ಮಾಡಿದ್ದೇನೆ. ಪೊಲೀಸರು ನಿಂತುಕೊಳ್ಳಿ ಎಂದು ಹೇಳಿದ್ದರು , ನಿಂತುಕೊಂಡಿದ್ದೇವು, ಫೋಟೋ ತೆಗೆದಿದ್ದಾರೆ. ಮೋಬೈಲ್ ಆನ್ ಮಾಡಿದ ವಿಚಾರವಾಗಿ ಫೋಟೋ ತೆಗೆದಿದ್ದಾರೆ. ಮೋಬೈಲ್ ನಲ್ಲಿ ಏನು ಮಾಡಿದರು ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿಲ್ಲ ಎನ್ನುವುದು ಸರಿಯಲ್ಲ. ಮೃತ ಯುವರಾಜ ನನ್ನ ತಮ್ಮನಾದ ಕಾರಣ ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯುವರಾಜನ ಸಾವಿಗೂ ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

PW-7

ಸಾಕ್ಷಿಯನ್ನು ಇದೇ ದಿನ ದಿ.28-11-2023 ರಂದು ಸಾಕ್ಷಿಯನ್ನು ಪುನಃ ಕರೆಸಿ ಪ್ರಮಾಣಿಕರಿಸಲಾಯಿತು.

<u>ಅನುಮತಿ ಮೇರೆಗೆ ಮುಂದುವರೆದ ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಮಹಜರನ್ನು ದಿ.11-03-2022 ರಂದು ಮಾಡಿದ್ದಾರೆ ಎಂದರೆ ಸಾಕ್ಷಿ ನೆನಪಿಲ್ಲ ಎಂದು ನುಡಿದಿದ್ದಾರೆ. ದಿ.11-03-2022 ಕ್ಕೆ ಮಾಡಿದ್ದಾರೆ ಎನ್ನುವುದು ಸರಿ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.
ಯಾವುದೇ ದಿನಾಂಕ ಗೊತ್ತಿಲ್ಲದಿದ್ದರೂ ಸಹ ಸುಳ್ಳು ದಿನಾಂಕ ಹೇಳುತ್ತಿದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.
(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 06

CW- 04

ಪ್ರ. ಬೋ. ದಿನಾಂಕಃ 28-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಅಜಯ್ |
| ತಂದೆ/ಗಂಡನ ಹೆಸರು | : | ಭೈರಪ್ಪ |
| ವಯಸ್ಸು | : | 32 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-5 ಮತ್ತು 13 ನನಗೆ ಗೊತ್ತು.

ಸುಮಾರು ಎರಡು ವರ್ಷಗಳ ಹಿಂದೆ ನನ್ನನ್ನು ಗ್ರಾಮಾಂತರ ಪೊಲೀಸ್ ಠಾಣೆಯ ಪೊಲೀಸರು ಶಿವಪುರದ ಯುವರಾಜನ ಮನೆಗೆ ಕರೆಸಿದ್ದರು. ಮಂಜುನಾಥ ಎನ್ನುವವರು ಸ್ಥಳವನ್ನು ತೋರಿಸಿದ್ದಾರೆ. ಇದೇ ಸ್ಥಳದಲ್ಲಿ ನೇಣು ಹಾಕಿಕೊಂಡಿದ್ದಾರೆ ಎಂದು ತಿಳಿಸಿದರು. ಆ ಸ್ಥಳದಲ್ಲಿ ಒಂದು ಟವಲ್ ತೋರಿಸಿದ. ಪೊಲೀಸರು ಟವಲ್ ಜಪ್ತಿ ಮಾಡಿ , ಫೋಟೋ ತೆಗೆದು ಮಹಜರ್ ಮಾಡಿದ್ದರೆ.

ಸಾಕ್ಷಿ ನಿಪಿ.6 ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಸಾಕ್ಷಿಯ ಸಹಿಯನ್ನು ನಿಪಿ.6(ಬಿ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ಈಗಾಗಲೇ ನಿಪಿ.7 ಮತ್ತು 8 ಎಂದು ಗುರುತಿಸಲಾಗಿದೆ. ಯುವರಾಜ ನೇಣುಹಾಕಿಕೊಳ್ಳಲು ಉಪಯೋಗಿಸಿದ ಬಟ್ಟೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಈಗಾಗಲೇ ಮು.ಮಾ.1 ಎಂದು ಗುರುತಿಸಲಾಯಿತು.

ಪಾಟೀಸವಾಲುಃ- ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನನ್ನನ್ನು ಮಂಜುನಾಥ ಸ್ಥಳಕ್ಕೆ ಕರೆದಿರುತ್ತಾನೆ. ಆಗ ನಾನು ನನ್ನ ಮನೆಯಲ್ಲಿದ್ದೆ.

ನನ್ನ ಮನೆಯಿಂದ ಮೃತ ನೇಣುಹಾಕಿಕೊಂಡ ಮನೆ ಸುಮಾರು 100 ಮೀಟರ್ ದೂರದಲ್ಲಿದೆ. ಸದರಿ ಮನೆ ನಮ್ಮ ಮನೆಯಿಂದ ನೇರವಾಗಿರುತ್ತದೆ. ಪೊಲೀಸರೇನು ನನ್ನನ್ನು ಕರೆದಿಲ್ಲ. ಪೊಲೀಸರು ಆ ಸಮಯಕ್ಕೆ ಬಂದರು , ಕರೆದರು, ಆಗ ಹೋಗಿ ನಿಂತಿದ್ದೇನೆ, ಫೋಟೋ ತೆಗೆದಿದ್ದಾರೆ. ಪೊಲೀಸರು ನನಗೆ ನೋಟೀಸು ಕೊಟ್ಟಿಲ್ಲ. ಆ ಸ್ಥಳದಲ್ಲಿ ಸುಮಾರು ಏಳೆಂಟು ಜನ ಸೇರಿದ್ದರು. ಮಹಜರ್ ಗೆ ನನ್ನನ್ನು ಬಿಟ್ಟು ಶಿವರಾಜ್ ಸಹಿ ಮಾಡಿದ್ದಾರೆ. ಭೀಮಪ್ಪ ಸಹಿ ಮಾಡಿದ್ದಾರೆ. ಬೇರೆಯವರು ಯಾರು ಸಹಿ ಮಾಡಿಲ್ಲ. ಪೊಲೀಸರೇ ಸದರಿ ಬಟ್ಟೆ ಬಿಚ್ಚಿರುತ್ತಾರೆ. ನಾವು ಹೋದ ಮೇಲೆ ಪೊಲೀಸರು ಸದರಿ ಬಟ್ಟೆ ಬಿಚ್ಚಿದ್ದಾರೆ. ಪಂಚನಾಮೆಯಲ್ಲಿ ನಾನು ಹೋದ ಮೇಲೆ ಬಟ್ಟೆ ಬಿಚ್ಚಿದ್ದಾರೆ ಎಂದು ಬರೆದಿದ್ದಾರೆ. ಪಂಚನಾಮೆಯನ್ನು ಸುಮಾರು 8-00 ರಿಂದ 10-00 ಗಂಟೆ ವರೆಗೆ ಪೊಲೀಸರು ಬರೆದಿದ್ದಾರೆ. ಅವರ ಹೆಸರು ಗೊತ್ತಿಲ್ಲ. ಬಹಳ ಜನ ಪೊಲೀಸರು ಬಂದಿದ್ದರು. ಮುಮಾ.1 ಟವಲ್ ಅಲ್ಲ , ಅಂಗಿ ಬಟ್ಟೆ ಎನ್ನುವುದು ಸರಿ . ಸದರಿ ಬಟ್ಟೆ ಎಷ್ಟು ಮೀಟರ್ ಇತ್ತು ಎಂದು ನಾನು ಅಳತೆ ಮಾಡಿಲ್ಲ. ಆ ಬಗ್ಗೆ ಪಂಚನಾಮೆಯಲ್ಲಿ ಬರೆದಿರುವ ಬಗ್ಗೆ ನನಗೆ ಗೊತ್ತಿಲ್ಲ.

ಮೃತ ಯಾವ ವಿಚಾರಕ್ಕೆ ನೇಣು ಹಾಕಿಕೊಂಡಿದ್ದ ಎನ್ನುವುದು ನನಗೆ ಗೊತ್ತಿಲ್ಲ. ನೇಣುಹಾಕಿಕೊಳ್ಳಲು ಯಾರು ಕಾರಣರು ಎನ್ನುವ ಬಗ್ಗೆ ನನಗೆ ಗೊತ್ತಿಲ್ಲ. ಮಂಜುನಾಥನ ಮಾತು ಕೇಳಿ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 03

CW- 13

ಪ್ರ. ಬೋ. ದಿನಾಂಕಃ 07-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಮಂಜುನಾಥ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 27 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಚಾಸಾ-1 ಮತ್ತು ಮೃತ ಯುವಾಜ ನನ್ನ ಅಣ್ಣಂದಿರುಗಳಾಗಬೇಕು. ಚಾಸಾ-15 ಉಷಾ ನನಗೆಅತ್ತಿಗೆ , ಚಾಸಾ-14 ನನ್ನ ತಾಯಿ. ಆರೋಪಿ ನನಗೆ ಗೊತ್ತು.

ಮೃತ ಯುವರಾಜ ಶಿವಪುರದ ತನ್ನ ಮನೆಯಲ್ಲಿರುತ್ತಿದ್ದ. ಪೇಂಟಿಂಗ್ ಕೆಲಸ ಮಾಡುತ್ತಿದ್ದ. ಚಾಸಾ-15 ಉಷಾ ಸಹ ಶಿವಪುರದಲ್ಲಿ ವಾಸಮಾಡುತ್ತಾರೆ. ಮೃತ ಯುವರಾಜ ಮತ್ತು ಆತನ ಅಣ್ಣ ಚಾಸಾ-1 ಶಿವಪುರದ ತಮ್ಮ ಮನೆಯಲ್ಲಿರುತ್ತಿದ್ದರು. ಚಾಸಾ- ನಾಗರಾಜ ಹೊಳಲ್ಕೆರೆಯಲ್ಲಿ ವಾಸ ಮಾಡುತ್ತಿದ್ದ.

ಸದರಿ ಯುವರಾಜ ತನ್ನ ಮನೆಯಲ್ಲಿ ನೇಣು ಹಾಕಿಕೊಡಿದ್ದ. ಆತನ ಸಾವಿನ ಬಗ್ಗೆ ಮೋಬೈಲ್ ನಲ್ಲಿ ದೃಷ್ಯಾವಳಿ ನೋಡಿದಾಗ ಆತನ ಸಾವಿಗೆ ಸಿದ್ದಪ್ಪನೇ ಕಾರಣ ಎಂದು ಗೊತ್ತಾಯಿತು. ಆ ಬಗ್ಗೆ ಆತ ಈ ಹಿಂದೆ ನನ್ನ ಮುಂದೆ ಏನೂ ಹೇಳಿಲ್ಲ.

ನಿಪಿ.4 ಮೋಬೈಲ್ ನಲ್ಲಿ ಇರುವ ಮೃತನ ವಿಡಿಯೋ ಹಾಗೂ ಸಂಭಾಷಣೆಯನ್ನು ನೋಡಿ , ಕೇಳಿ ಗುರುತಿಸಿರುತ್ತಾರೆ.

ದಿ.25-02-2022 ರಂದು ಪೊಲೀಸರು ಕೃತ್ಯ ನಡೆದ ಸ್ಥಳಕ್ಕೆ ಬಂದಿದ್ದರು, ಪೊಲೀಸರಿಗೆ ಯುವರಾಜನು ನೇಣುಹಾಕಿಕೊಳ್ಳಲು ಉಪಯೋಗಿಸಿದ ಬಟ್ಟೆ ತೋರಿಸಿದ್ದೇನೆ.

ಪೊಲೀಸರು ಸ್ಥಳದಲ್ಲಿ ಮಹಜರ್ ಮಾಡಿ , ಬಟ್ಟೆ ಜಪ್ತಿ ಮಾಡಿ , ಫೋಟೋ ತೆಗೆಸಿ , ನನ್ನ ಸಹಿ ಪಡೆದಿದ್ದಾರೆ.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು , ಮಹಜರನ್ನು ನಿಪಿ.6 ಎಂದು, ಸಾಕ್ಷಿಯ ಸಹಿಯನ್ನು ನಿಪಿ.6(ಎ) ಎಂದು ಗುರುತಿಸಲಾಯಿತು. ಫೋಟೋಗಳನ್ನು ಸಾಕ್ಷಿ ನೋಡಿ ಗುರುತಿಸಿದ್ದು , ಅವುಗಳನ್ನು ನಿಪಿ.7 ಮತ್ತು 8 ಎಂದು ಗುರುತಿಸಲಾಯಿತು. ಶೀಲ್ ಕವರ್ ನಿಂದ ಬಟ್ಟೆಯನು ತೆಗೆದು ತೋರಿಸಲಾಯಿತು. ಯುವರಾಜ ನೇಣುಹಾಕಿಕೊಳ್ಳಲು ಉಪಯೋಗಿಸಿದ ಬಟ್ಟೆಯನ್ನು ಸಾಕ್ಷಿ ನೋಡಿ ಗುರುತಿಸಿದ್ದು ಅದನ್ನು ಮು.ಮಾ.1 ಎಂದು ಗುರುತಿಸಲಾಯಿತು.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–

ಯುವರಾಜ ನಮ್ಮ ಮನೆಯ ಪಕ್ಕ ಒಬ್ಬನೇ ವಾಸ ಮಾಡುತ್ತಿದ್ದ , ಆತನಿಗೆ ಮದುವೆಯಾಗಿರಲಿಲ್ಲ ಎನ್ನುವುದು ಸರಿ. ಆರೋಪಿ ನನ್ನ ಅತ್ತಿಗೆ ಉಷಾಳ ಜೊತೆ ಅನೈತಿಕ ಸಂಬಂಧ ಇಟ್ಟುಕೊಂಡಿದ್ದ , ಆಗಾಗ ಆತ ಆಕೆಯ ಮನೆಗೆ ಬಂದು ಹೋಗುತ್ತಿದ್ದ ಎನ್ನುವುದು ಸರಿ. ಆರೋಪಿ ಒಂದು ದಿನ ಉಷಾಳ ಮನೆಯಲ್ಲಿದ್ದಾಗ ಮೃತ ಯುವರಾಜ ಉಷಾಳ ಮನೆಗೆ ಹೋಗಿದ್ದಾಗ  ಆರೋಪಿ ಮೃತ ಯುವರಾಜನಿಗೆ ಅವಾಚ್ಯ ಶಬ್ದಗಳಿಂದ ಬೈದು , ನೀನು ಎಲ್ಲಿಯಾದರೂ ಹೋಗಿ ಸಾಯಿ , ಇನ್ನೊಂದು ಸಾರಿ ಬಂದರೆ ನಿನ್ನನ್ನು ಜೀವಸಹಿತ ಉಳಿಸುವುದಿಲ್ಲ ಎಂದು ಬೆದರಿಕೆ ಹಾಕಿದ್ದ ಎಂದು ಮೃತನು ನನ್ನ ಮುಂದೆ ಅತ್ತುಕೊಂಡು ಹೇಳಿದ್ದ ಎನ್ನುವುದು ಸರಿ. ಆತ ಸತ್ತ ವಿಷಯವನ್ನು ತಿಳಿದು , ಸ್ಥಳಕ್ಕೆಹೋಗಿ ಹೆಣವನ್ನು ನೋಡಿದೆ , ಆತನ ಜೇಬಿನಲ್ಲಿ ಮೋಬೈಲ್ ಇತ್ತು. ಮೋಬೈಲ್ ನ್ನು ನೋಡಿದಾಗ ಅದರಲ್ಲಿ ದೃಷ್ಯಾವಳಿ ಗಳು ಮತ್ತು ಆತನ ಸಂಭಾಷಣೆ ಇದ್ದವು. ಸದರಿ ಮೋಬೈಲನ್ನು ನೋಡಿ ಸಾಕ್ಷಿ ಗುರುತಿಸಿದ್ದು ಅದನ್ನು ಈಗಾಲೇ ನಿಪಿ.4 ಎಂದು ಗುರುತಿಸಲಾಗಿದೆ.  ಸಾಕ್ಷಿ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನಾನು ಮಿಕ್ಸಿ ಜಾರ್ ರಿಪೇರಿಯನ್ನು ಊರು ಊರಿಗೆ ಹೋಗಿ ಮಾಡುತ್ತೇನೆ.

ನಾನು ಪ್ರತಿ ದಿನ ಸದರಿ ಕೆಲಸಕ್ಕೆ ಹೋಗುತ್ತೇನೆ. ಬೆಳಿಗ್ಗೆ 6-00 ಗಂಟೆಗೆ ಹೋದರೆ ವಾಪಸ್ ಸಂಜೆ 4-30 ರಿಂದ 5-00 ಗಂಟೆಗೆ ಬರುತ್ತೇನೆ. ನಾಗರಾಜ ಹೊಳಲ್ಕೆರೆಯಲ್ಲಿ ವಾಸ ಮಾಡುತ್ತಾನೆ. ಯುವರಾಜ ಸಾಯುವ ಎರಡು ದಿನ ಮೊದಲು ನನ್ನ ಮುಂದೆ ಆರೋಪಿ ಈ ರೀತಿ ಬದರಿಕೆ ಹಾಕುತ್ತಿದ್ದಾನೆ ಎಂದು ಹೇಳಿದ್ದ. ಯುವರಾಜ ತನ್ನ ವೈಯಕ್ತಿಕ ವಿಚಾರ ನನ್ನ ಮುಂದೆ ಹೇಳುತ್ತಿದ್ದ. ಆ ರೀತಿ ಯುವರಾಜ ನನ್ನ ಮುಂದೆ ಹೇಳಿದ ದಿನಾಂಕ , ತಿಂಗಳು ಮತ್ತು ವರ್ಷ ನಿಖರವಾಗಿ ಹೇಳಲು ಗೊತ್ತಾಗುವುದಿಲ್ಲ. ಯುವರಾಜ ನನ್ನ ಮುಂದೆ ಆ ರೀತಿ ಹೇಳಿಲ್ಲ ಎನ್ನುವುದು ಸರಿಯಲ್ಲ. ಫಿರ್ಯಾದಿಗೆ ಸಹಾಯ ಮಾಡಲು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಮತ್ತು ಯುವರಾಜನ ಮಧ್ಯ ನಡೆದ ಘಟನೆಯನ್ನು ನಾನು ಪ್ರತ್ಯೇಕ್ಷವಾಗಿ ನೋಡಿಲ್ಲ ಆದರೆ ಯುವರಾಜ ನನ್ನ ಮುಂದೆ ಹೇಳಿದ್ದ. ಮೃತ ಯುವರಾಜ ತನ್ನ ವೈಯಕ್ಕಿಕ ಕಾರಣದಿಂದ ನೇಣುಹಾಕಿಕೊಂಡು ಸತ್ತಿದ್ದಾನೆ ಎನ್ನುವುದು ಸರಿಯಲ್ಲ. ಆತ ಸತ್ತ ದಿನವೇ ನಾನು ವಿಡಿಯೋ ನೋಡಿದ್ದೇನೆ. ಫೋನ್ ನಲ್ಲಿ ಇರುವ ವಿಡಿಯೋವನ್ನು ನಾನು ಊರಿನಲ್ಲಿ ನೋಡಿದ್ದೇನೆ.ಹೆಣದ ಬಳಿ ಇದ್ದವರು ಅದನ್ನು ಓಪನ್ ಮಾಡಿ ತೋರಿಸಿದ್ದರು. ಊರವರು ನೋಡಿ ತೋರಿಸಿದ್ದಾರೆ. ಅವರ ಹೆಸರು ಈಗ ಹೇಳಲು ಆಗವುದಿಲ್ಲ. ಮೃತ ಯುವರಾಜನ ಸಾವಿಗೂ , ಆರೋಪಿಗೂ ಯಾವುದೇ ಸಂಬಧವಿಲ್ಲ ಎನ್ನುವುದು ಸರಿಯಲ್ಲ. ವಿಡಿಯೋ ಮತ್ತು ಧ್ವನಿಮುದ್ರಣಗಳು ಮೃತನದು ಎನ್ನುವದಕ್ಕೆ ಯಾವುದೇ ದಾಖಲೆಗಳು ಇಲ್ಲ ಎನ್ನುವುದು ಸರಿಯಲ್ಲ. ಫಿರ್ಯಾದಿಯ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಮೃತನ ಸಾವಿಗೆ ಪ್ರಚೋದನೆ ಮಾಡಿಲ್ಲ ಹಾಗೂ ಆತನಿಗೆ ಯಾವುದೇ ಪ್ರಾಣ ಬೆದರಿಕೆ ಹಾಕಿಲ್ಲ ಎನ್ನುವುದು ಸರಿಯಲ್ಲ. ಮೃತನು ನನಗೆ ಅಣ್ಣನಾಗಬೇಕಾಗಿರುವುದರಿಂದ ನಾನು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಉಷಾಳಿಗೂ ಮತ್ತು ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಉಷಾನ ಗಂಡನಿಗೂ, ಆರೋಪಿಗೂ ಹಣದ ವ್ಯವಹಾರ ಇದೆ , ಆದ್ದರಿಂದ ನಾನು ಸುಳ್ಳು ಹೇಳುತ್ತಿದೇನೆ ಎನ್ನುವುದು ಸರಿಯಲ್ಲ. ಮೃತ ಯುವರಾಜ ಮತ್ತು ಫಿರ್ಯಾದಿಗೆ ಉಷಾಳ ಗಂಡನ ಮೇಲೆ ಇರುವ ದ್ವೇಷಕ್ಕಾಗಿ ನಾನು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

ಮು.ಮಾ.1 ಬಟ್ಟೆ ಯುವರಾಜ ನೇಣು ಹಾಕಿಕೊಳ್ಳಲು ಉಪಯೋಗಿಸಿದ

ಬಟ್ಟೆಯನ್ನು ಯುವರಾಜ ಬಟ್ಟೆ ಹೊಲಿಸಲು ತಂದಿದ್ದ. ಅದು ಎಷ್ಟ ಮೀಟರ್ ಇತ್ತು ಎಂದು ಹೇಳಲು ಆಗವುದಿಲ್ಲ. ಪಂಚನಾಮೆಯಲ್ಲಿ ಇಷ್ಟು ಮೀಟರ್ ಉದ್ದದ ಬಟ್ಟೆ ಎಂದು ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಪಂಚನಾಮೆಯಲ್ಲಿ ಯಾವ ಬಣ್ಣದ ಬಟ್ಟೆ ಎಂದು ಹೇಳಿರುವುದಿಲ್ಲ. ನೆಲದಿಂದ ನೇಣುಹಾಕಿಕೊಂಡಿದ್ದ ಮನೆಯ ಮರದ ತೊಲೆ ಎಷ್ಟು ಎತ್ತರದಲ್ಲಿ ಇತ್ತು ಎಂದು ಪಂಚನಾಮೆಯಲ್ಲಿ ಬರೆದ ಬಗ್ಗೆ ನನಗೆ ಗೊತ್ತಿಲ್ಲ. ಒಂದೇ ಜಾಗದಲ್ಲಿ ನಿಂತು ಫೋಟೋ ತೆಗೆಸಿದ್ದೇವೆ. ಮೊದಲು ಬಟ್ಟೆ ಫೋಟೋ ತೆಗೆದುಕೊಂಡು , ನಂತರ ನಾವು ನಿಂತುಕೊಂಡಿದ್ದ ಫೋಟೋ ತೆಗೆದಿದ್ದಾರೆ. ಎರಡು ಫೋಟೋಗಳಲ್ಲಿ ವ್ಯತಾಸ ಕಾಣುತ್ತಿದೆ ಎನ್ನುವುದು ಸರಿ. ಮು.ಮಾ.1 ರಂತಹ ಬಟ್ಟೆ ಸಾಮಾನ್ಯವಾಗಿ ಎಲ್ಲರ ಮನೆಯಲ್ಲಿ ಸಿಗುತ್ತವೆ ಎನ್ನುವುದು ಸರಿ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 05

CW- 15

ಪ್ರ. ಬೋ. ದಿನಾಂಕಃ 07-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಉಷಾ |
| ತಂದೆ/ಗಂಡನ ಹೆಸರು | : | ಮಂಜಪ್ಪ |
| ವಯಸ್ಸು | : | 34 ವರ್ಷ |
| ಉದ್ಯೋಗ | : | ಗ್ರಾಮಪಂಚಾಯಿತಿ ಕೃಷಿ ಸಹಾಯಕಿ , ಆನಗೋಡು |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಚಾಸಾ-1 ಮತ್ತು ಮೃತ ಯುವಾಜ ನನಗೆ ಮೈದುನರಾಗಬೇಕು. ಚಾಸಾ-13 ಸಹ ನನಗೆ ಮೈದುನನಾಗಬೇಕು. ಚಾಸಾ-14 ಯಶೋದಮ್ಮ ನನಗೆ ಅತ್ತಿಗೆಯಾಗಬೇಕು.

ಚಾಸಾ-1 ಮತ್ತು ಮೃತ ಯುವರಾಜ ಇಬ್ಬರೂ ಪೇಂಟ್ ಕೆಲಸ ಮಾಡುತ್ತಿದ್ದರು. ನಾಗರಾಜ ಮೊದಲು ನಮ್ಮ ಊರಿನಲ್ಲಿದ್ದ , ಈಗ ಎಲ್ಲಿದ್ದಾನೆ ಎಂದು ಗೊತ್ತಿಲ್ಲ.

ನಮ್ಮ ಮನೆ ಮತ್ತು ಯಶೋದಮ್ಮನ ಮನೆ ಸ್ವಲ್ಪ ದೂರದಲ್ಲಿರುತ್ತದೆ. ಯುವರಾಜನ ಮನೆ ಮತ್ತು ಯಶೋದಮ್ಮನ ಮನೆ ಅಕ್ಕಪಕ್ಕದಲ್ಲಿರುತ್ತವೆ. ನಮ್ಮ ಮನೆಯಲ್ಲಿ ನಾನು , ನನ್ನ ಮಾವ , ನನ್ನ ಮಕ್ಕಳು ಇರುತ್ತೇವೆ. ನನ್ನ ಯಜಮಾನರು ಯುವರಾಜ ಸತ್ತ ಆರು ದಿನದ ನಂತರ ಅಪಘಾತದಲ್ಲಿ ಮೃತಪಟ್ಟಿರುತ್ತಾರೆ.

ಯುವರಾಜ ಸಾಯುವ ಮೊದಲು ನಾನು , ನನ್ನ ಗಂಡ , ಮಕ್ಕಳು ಮತ್ತು ನನ್ನ ಮಾವ ನಮ್ಮ ಮನೆಯಲ್ಲಿ ವಾಸ ಮಾಡುತ್ತಿದ್ದೇವು. ಯುವರಾಜ ಅವರ ಮನೆಯಲ್ಲಿ ಯಾರು ಅಡುಗೆ ಮಾಡುವವರು ಇಲ್ಲ ಎಂದು ಊಟಕ್ಕೆ ನಮ್ಮ ಮನೆಗೆ ಬಂದು ಹೋಗುತ್ತಿದ್ದ. ಆತನ ಅಣ್ಣ ಸಹ ನಮ್ಮ ಮನೆಗೆ ಬಂದು ಹೋಗುತ್ತಿದ್ದ.

ಆರೋಪಿ ನನಗೆ ಗೊತ್ತು . ಆತ ನನ್ನ ಗಂಡನ ಸ್ನೇಹಿತ . ಆರೋಪಿ ನನ್ನ ಗಂಡ ಮನೆ

ಸಾಲ ತೆಗೆದುಕೊಂಡದ್ದಕ್ಕೆ ಜಾಮೀನುದಾರನಾಗಿ ಸಹಿ ಮಾಡಿದ್ದಾನೆ. ಲೋನ್ ಕಟ್ಟಿಲ್ಲದೇಯಿದ್ದದ್ದರಿಂದ ಲೋನ್ ಕಟ್ಟಿ ಎಂದು ಆರೋಪಿ ನಮ್ಮ ಮನೆಗೆ ಬಂದು ಹೇಳಿದ್ದ. ಯುವರಾಜ ನಮ್ಮ ಮನೆಗೆ ಬರುವ ವಿಚಾರವಾಗಿ ಆರೋಪಿ ಮತ್ತು ಯುವರಾಜನ ಮಧ್ಯ ಯಾವುದೇ ಗಲಾಟೆಯಾಗಿರಲಿಲ್ಲ. ಯುವರಾಜ ನೇಣು ಹಾಕಿಕೊಂಡು ಸತ್ತಿದ್ದಾನೆ. ಬೆಳಿಗ್ಗೆ 7-00 ಗಂಟೆ ಸಮಯದಲ್ಲಿ ಆತನ ಹೆಣವನ್ನು ತನ ಮನೆಯಲ್ಲಿ ನೋಡಿದ್ದೇನೆ. ಆತನ ಸಾವಿಗೆ ಯಾರು ಕಾರಣರು ಎನ್ನುವುದು ನನಗೆ ಗೊತ್ತಾಗಿಲ್ಲ.

ಯುವರಾಜನ ಮೋಬೈಲನ್ನು ಹಾಗೂ ಮೋಬೈಲ್ ನಲ್ಲಿ ಇರುವ ಸಂಭಾಷಣೆಯನ್ನು, ವಿಡಿಯೋವನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–

ನಾನು ಆರೋಪಿಯ ಬಳಿ ಕೈಗಡವಾಗಿ ಹಣವನ್ನು ಪಡೆಯುವುದು ಕೊಡುವುದು ಮಾಡುತ್ತಿದ್ದೆ. ಅದರಿಂದ ಆರೋಪಿ ನಮ್ಮ ಮನೆಯ ಕಷ್ಟ ಸುಖಗಳಲ್ಲಿ ಭಾಗಿಯಾಗುತ್ತಿದ್ದ ಎನ್ನುವುದು ಸರಿಯಲ್ಲ. ಯುವರಾಜ ನಮ್ಮ ಮನೆಗೆ ಬರುತ್ತಿರುವುದನ್ನು ನೋಡಿ ಆರೋಪಿ ಸಹಿಸಿಕೊಳ್ಳುತ್ತಿರಲಿಲ್ಲ ಎನ್ನುವುದು ಸರಿಯಲ್ಲ. ಆರೋಪಿ ನನಗೆ ಆತ ಯಾಕೆ ಇಲ್ಲಿಗೆ ಬರುತ್ತಾನೆ , ಅತನನ್ನು ಇಲ್ಲಿ ಬಿಟ್ಟುಕ್ಕೊಳ್ಳಬೇಡಿ ಎಂದು ತಾಕೀತು ಮಾಡಿದ್ದ ಎನ್ನುವುದು ಸರಿಯಲ್ಲ. ನಾನು ಮತ್ತು ಆರೋಪಿ ನಮ್ಮ ಮನೆಯಲ್ಲಿದ್ದಾಗ ಮೃತ ಯುವರಾಜ ನಮ್ಮ ಮನೆಗೆ ಬಂದಿದ್ದ ಆಗ ಯುವರಾಜ ಮತ್ತು ಆರೋಪಿಯ ಮಧ್ಯ ಗಲಾಟೆಯಾಗಿತ್ತು, ಆಗ ಯುವರಾಜನಿಗೆ ಸಿದ್ದಪ್ಪ - ನೀನು ಇವರ ಮನೆಗೆ ಬರಬೇಡ , ನನನನ್ನು ಬಿಟ್ಟರೇ ಬೇರೆ ಯಾರಿಗೂ ಅವಕಾಶ ಇಲ್ಲ, ನೀನು ಇನ್ನೊಮ್ಮೆ ಬಂದರೆ ನಿನಗೆ ಒಂದು ಗತಿ ಕಾಣಿಸುತ್ತನೆ ಎಂದು ಆತನಿಗೆ ಆರೋಪಿ ಬೆದರಿಕೆ ಹಾಕಿದ್ದ ಎನ್ನುವುದು ಸರಿಯಲ್ಲ. ಅದಾದ ನಂತರ ಯುವರಾಜ ನಾನು ಜೀವಸಹಿತ ಉಳಿಯುವುದಿಲ್ಲ , ನಾನು ಸಾಯುತ್ತೇನೆ ಎಂದು ನನ್ನ ಬಳಿ ಹೇಳಿದ್ದ ಎನ್ನುವುದು ಸರಿಯಲ್ಲ. ಸಾವಿನ ವಿಚಾರವನ್ನು ತಿಳಿದು , ಆತನ ಅಣ್ಣ ಸ್ಥಳಕ್ಕೆ ಬಂದು ನೋದಾಗ ಆತನ ಬಳಿ ಮೋಬೈಲ್ ಇತ್ತು , ಆ ಮೋಬೈಲ್ ನಲ್ಲಿದ್ದ ವಿಡಿಯೋ ಮತ್ತು ಆಡಿಯೋ ತೋರಿಸಿದ ಮತ್ತು ಕೇಳಿಸಿದ. ಯುವರಾಜ ತನ್ನ ಸಾವಿಗೆ ಆರೋಪಿತನೇ ಕಾರಣ ಎಂದು ಅದರಲ್ಲಿ ಹೇಳಿದ್ದಾನೆ ಎನ್ನುವುದು ಸರಿಯಲ್ಲ. ಎಲ್ಲಾ ವಿಚಾರ ಗೊತಿತದ್ದರೂ

ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನಾನು ಈ ಬಗ್ಗೆ ಪೊಲೀಸರ ಮುಂದೆ ನಿಪಿ.9 ರಂತೆ ಹೇಳಿಕೆ ನೀಡಿದೇನೆ ಎನ್ನುವುದು ಸರಿಯಲ್ಲ.

ಪಾಟೀಸವಾಲುಃ- ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಆರೋಪಿಪರ ವಕೀಲರು ಹಾಜರಿದ್ದು, ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

ಮರು ವಿಚಾರಣೆಃ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 04

CW- 14

ಪ್ರ. ಬೋ. ದಿನಾಂಕಃ 07-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಯಶೋದಮ್ಮ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 66 ವರ್ಷ |
| ಉದ್ಯೋಗ | : | ಕೂಲಿ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಚಾಸಾ-1 ಮತ್ತು ಮೃತ ಯುವಾಜ ನನ್ನ ಅಕ್ಕನ ಮಕ್ಕಳು. ನನ್ನ ಗಂಡನಿಗೆ ಇಬ್ಬರು ಹೆಂಡತಿಯರು. ನಾಗರಾಜ ಮತ್ತು ಯುವರಾಜ ನನ್ನ ಗಂಡನ ಹಿರಿಯ ಹೆಂಡತಿ ಮಕ್ಕಳು. ಚಾಸಾ-1 ಮತ್ತು ಮೃತ ಯುವರಾಜ ಪೇಂಟಿಂಗ್ ಕೆಲಸ ಮಾಡಿಕೊಂಡಿದ್ದರು. ಅವರು ಶಿವಪುರದ ಅವರ ಮನೆಯಲ್ಲಿ ವಾಸವಾಗಿದ್ದರು. ಅವರ ಮನೆ ನಮ್ಮ ಮನೆಯ ಪಕ್ಕದಲ್ಲಿದೆ. ಚಾಸಾ-15 ಉಷಾ ನನಗೆ ಸಂಬಂಧವಾಗಬೇಕು. ಆರೋಪಿ ನನಗೆ ಗೊತ್ತು.

ಮೃತ ಯುವರಾಜ ಚಾಸಾ-15 ಉಷಾಳ ಮನೆಗೆ ಹೋಗುತ್ತಿದ್ದ. ಆರೋಪಿ ಸಿದ್ದೇಶ ಅವರ ಮನೆಗೆ ಯಾಕೆ ಬರುತ್ತಿಯಾ, ಸಾಯಿ ಎಂದು ಹಿಂಸೆ ಕೊಡುತ್ತಿದ್ದ. ಸದರಿ ವಿಷಯ ನನಗೆ ಫೋನಿನಲ್ಲಿ ಗೊತ್ತಾಗಿರುತ್ತದೆ. ಯುವರಾಜ ಸಾಯುವ ಹಿಂದಿನ ದಿನ ರಾತ್ರಿ 10-00 ಗಂಟೆ ವರೆಗೆ ನಮ್ಮ ಮನೆಯಲ್ಲಿದ್ದ. ಆ ನಂತರ ಆತ ಮಲಗಲು ತನ್ನ ಮನೆಗೆ ಹೋದ. ನಾನೂ ನಮ್ಮ ಮನೆಯಲ್ಲಿ ಮಲಗಿದ್ದೆ. ನಾನು ಮಾರನೇ ದಿನ ಬೆಳಿಗ್ಗೆ 7-15 ಗಂಟೆಗೆ ಯುವರಾಜನಿಗೆ ಟೀ ಕೊಡಲು ಹೋಗಿದ್ದೆ. ನಾನು ಹೋಗಿ ನೋಡಿದಾಗ ಆತ ನೇಣು ಹಾಕಿಕೊಂಡಿದ್ದ. ನಾನು ಅದನ್ನು ನೋಡಿ ಕಿರುಚಿಕೊಂಡೆ , ನನ್ನ ಮೈದುನ ಮತ್ತು ಇತರರು ಬಂದು ನೇಣುಹಾಕಿಕೊಂಡಿದ್ದ ಸ್ಥಿತಿಯಿಂದ ಹೆಣವನ್ನು ಇಳಿಸಿರುತ್ತಾರೆ. ಚಾಸಾ-1 ಆ ಸಮಯದಲ್ಲಿ ಹೊಳಲ್ಕೇರಿಯಲ್ಲಿದ್ದ. ಬೆಳಿಗ್ಗೆ 9-00 ಗಂಟೆಗೆ ನಾಗರಾಜ ಅಲ್ಲಿಗೆ ಬಂದ. ಮೃತ

ಯುವರಾಜನ ಬಳಿ ಫೋನ್ ಇತ್ತು. ಆ ನಂತರ ಪೊಲೀಸರು ಸಹ ಬಂದಿದ್ದರು.

ನನ್ನ ಸಾವಿಗೆ ಸಿದ್ದೇಶ ಕಾರಣ ಎಂದು ಅತ ಮೋಬೈಲ್ ನಲ್ಲಿ ಚಿತ್ರಿಕರಣ ಮಾಡಿದ್ದ. ಸಾಕ್ಷಿ ನಿಪಿ.4 ಮೋಬೈಲ್ ನಲ್ಲಿ ಇರುವ ಸಂಭಾಷಣೆ ಮತ್ತು ವಿಡಿಯೋ ನೋಡಿ , ಕೇಳಿ ಗುರುತಿಸಿರುತ್ತಾರೆ. ನನ್ನ ಮಗನ ಸಾವಿಗೆ ಆರೋಪಿಯೇ ಕಾರಣನಾಗಿರುತ್ತಾನೆ. ಸಾಕ್ಷಿ ಆರೊಪಿಯನ್ನು ನೋಡಿ ಗುರುತಿಸಿರುತ್ತಾರೆ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಭಾಗಶಃ ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

<u>ಪಾಟೀ ಸವಾಲುಃ</u> ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ-

ಮೃತ ಯುವರಾಜ ಚಾಸಾ-15 ಉಷಾ ರವರ ಮನೆಯಲ್ಲಿದ್ದಾಗ ಆರೋಪಿ ಸಹ ಅದೇ ಮನೆಗೆ ಬಂದಿದ್ದು, ನೀನು ಇಲ್ಲಿಗೆ ಯಾಕೆ ಬರುತ್ತೀಯಾ , ಇನ್ನೊಂದು ಸಾರಿ ಬಂದರೆ ನಿನ್ನನ್ನು ಜೀವ ಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿದ್ದ ವಿಚಾರವನ್ನು ಯುವರಾಜ ಸಾಯುವ ಎರಡು ದಿನ ಮೊದಲು ನನ್ನ ಮುಂದೆ ಅಳುತ್ತ ಹೇಳಿದ ಎನ್ನುವುದು ಸರಿ. ಆರೋಪಿ ಮತ್ತು ಉಷಾ ಅಕ್ರಮ ಸಂಬಂಧ ಹೊಂದಿದ್ದರು ಎನ್ನುವುದು ಸರಿ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಯುವರಾಜ ಎರಡು ದಿನಕ್ಕೆ ಒಮ್ಮೆ ಪೇಂಟ್ ಕೆಲಸ ಮಾಡುತ್ತಿದ್ದ. ಆತ ಸಾಯುವ ಹಿಂದಿನ ದಿನದ ಮೂರು ದಿನದ ಹಿಂದೆ ಕೆಲಸಕ್ಕೆ ಹೋಗಿ ಬಂದಿದ್ದ. ದಿನಾಂಕಗಳನ್ನು ಹೇಳಲು ಆಗುವುದಿಲ್ಲ. ಮಂಗಳವಾರ ಆತ ಕೆಲಸಕ್ಕೆ ಹೋಗಿದ್ದ. ಬುಧವಾರ ರಾತ್ರಿ 9-30 ರಿಂದ 10-00 ಗಂಟೆ ಸುಮಾರಿಗೆ ವಾಪಸ್ ಬಂದಿರುತ್ತಾನೆ. ನಾನು ಒಬ್ಬಳೇ ಚಹಾ ತೆಗೆದುಕೊಂಡು ಹೋಗಿದ್ದೆ. ನಾನು ನೋಡಿ ಕಿರುಚಿದಾಗ ಜನರು ಸೇರಿದ್ದರು. ನಮ್ಮ ಊರಿನವರು ಯಾರೋ ನಾಗರಾಜನಿಗೆ ಫೋನ್ ಮಾಡಿದ್ದಾರೆ . ನಾನು ನಾಗರಾಜನಿಗೆ ಫೋನ್ ಮಾಡಿಲ್ಲ.

ಪೊಲೀಸ್ ಠಾಣೆಯಲ್ಲಿ ಪೊಲೀಸರು ಮೋಬೈಲ್ ನಲ್ಲಿ ಇರುವುದನ್ನು ನೋಡಿದಾಗ , ಸಂಭಾಷಣೆ ಮತ್ತು ವಿಡಿಯೋದ ವಿಚಾರ ಗೊತ್ತಾಗಿರುತ್ತದೆ. ಆತ ಸತ್ತ ಎರಡು ಮೂರು

ದಿನದ ನಂತರ ಗೊತ್ತಾಗಿರುತ್ತದೆ. ಚಾಸಾ-1 ರವರ ಮಾತನ್ನು ಕೇಳಿಕೊಂಡು ಮೃತ ಯುವರಾಜ ನನ್ನ ಅಕ್ಕನ ಮಗನಾಗಿರುವುದರಿಂದ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗೂ ಮತ್ತು ಉಷಾಳಿಗೂ ಯಾವುದೇ ಸಂಬಂಧ ಇರಲಿಲ್ಲ ಎನ್ನುವುದು ಸರಿಯಲ್ಲ. ಸಿದ್ದಪ್ಪನನ್ನು ಈ ಕೇಸಿನಲ್ಲಿ ಸಿಗಿಸಬೇಕೆಂದು ಫಿರ್ಯಾದಿ ಮತ್ತು ನನ್ನ ಮಗನ ಮಾತು ಕೇಳಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಯುವರಾಜನ ಸಾವಿಗೂ, ಆರೋಪಿ ಸಿದ್ದಪ್ಪನಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ನಿಪಿ.4 ರ ವಿಡಿಯೋದಲ್ಲಿರುವ ಧ್ವನಿ ಮುದ್ರಣ ಸಂಭಾಷಣೆ ಯುವರಾಜನದು ಅಲ್ಲ ಎನ್ನುವುದು ಸರಿಯಲ್ಲ. ಈ ಕೇಸಿಗಾಗಿ ವಿಡಿಯೋ ಮತ್ತು ಸಂಭಾಷಣೆ ಸೃಷ್ಟಿಸಲಾಗಿದೆ ಎನ್ನುವುದು ಸರಿಯಲ್ಲ.

ಮರು ವಿಚಾರಣೆ:- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.

S.C.9/2023

PW- 02

CW- 12

ಪ್ರ. ಬೋ. ದಿನಾಂಕಃ 07-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ಅಂಜನಪ್ಪ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 48 ವರ್ಷ |
| ಉದ್ಯೋಗ | : | ವ್ಯಾಪಾರ |
| ವಾಸ | : | ಶಿವಪುರ, ದಾವಣಗೆರೆ ತಾ. |

ಮುಖ್ಯ ವಿಚಾರಣೆಃ ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ನನಗೆ ಚಾಸಾ-1 ಗೊತ್ತು. ಚಾಸಾ-1 ರವರ ತಮ್ಮ ಮೃತ ಯುವರಾಜ ಆಗಿರುತ್ತಾನೆ. ಚಾಸಾ-1 ಮತ್ತು ಮೃತ ಯುವರಾಜ ಪೇಂಟಿಂಗ್ ಕೆಲಸ ಮಾಡುತ್ತಿದ್ದರು. ಅವರು ಹೊರಗಡೆ ಕೆಲಸ ಮಾಡುತ್ತಿದ್ದರು. ಯುವರಾಜ ಯಾರ ಜೊತೆ ವಾಸ ಮಾಡುತ್ತಿದ್ದ ನನಗೆ ಗೊತ್ತಿಲ್ಲ. ಚಾಸಾ-13, 14 ಮತ್ತು 15 ನನಗೆ ಗೊತ್ತು. ಆರೋಪಿ ನನಗೆ ಗೊತ್ತು. ಉಷಾ ಚಾಸಾ-1 ರವರ ಅಣ್ಣನ ಮಗನ ಹೆಂಡತಿ ಇರುತ್ತಾರೆ.

ಯುವರಾಜ ಮತ್ತು ಆರೋಪಿ ಮಧ್ಯ ಏನು ಗಲಾಟೆಯಾಗಿತ್ತು ನನಗೆ ಗೊತ್ತಿಲ್ಲ. ಯುವರಾಜ ನನಗೆ ಈ ಬಗ್ಗೆ ಯಾವುದೇ ಮಾಹಿತಿ ತಿಳಿಸಿಲ್ಲ. ಯುವರಾಜ ನೇಣುಹಾಕಿಕೊಂಡು ಸತ್ತಿದ್ದಾನೆ. ಆತ ಯಾವ ಕಾರಣಕ್ಕೆ ನೇಣು ಹಾಕಿಕೊಂಡು ಸತ್ತಿದ್ದಾನೆ, ಆತನ ಸಾವಿಗೆ ಯಾರು ಕಾರಣ ಎಂದು ನನಗೆ ಗೊತ್ತಿಲ್ಲ. ಆತನ ಮೃತ ದೇಹವನ್ನು ಆತನ ಮನೆಯ ಬಳಿ ನೋಡಿದ್ದೇನೆ. ಆ ಸ್ಥಳದಲ್ಲಿ ಯುವರಾಜನಿಗೆ ಸಂಬಂಧಿಸಿದ ಯಾವುದೇ ವಸ್ತುವಿನ ಬಗ್ಗೆ ನನಗೆ ಗೊತ್ತಿಲ್ಲ. ಆತನ ಸಾವಿನ ಕಾರಣ ನನಗೆ ಗೊತ್ತಾಗಿಲ್ಲ. ಈ ಬಗ್ಗೆ ನಾನು ಪೊಲೀಸರ ಮುಂದೆ ಹೇಳಿಕೆ ಕೊಟ್ಟಿಲ್ಲ. ನಿಪಿ.4 ಮೋಬೈಲನ್ನು ನಾನು ನೋಡಿಲ್ಲ.

(ಈ ಹಂತದಲ್ಲಿ ಮಾನ್ಯ ಅಭಿಯೋಜಕರು ಈ ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಅನುಮತಿ ಕೋರಿದ್ದು, ಅನುಮತಿ ನೀಡಲಾಯಿತು.)

**<u>ಪಾಟೀ ಸವಾಲುಃ</u>** ಮಾನ್ಯ ಸರ್ಕಾರಿ ಅಭಿಯೋಜಕರವರಿಂದಃ–

ಆರೋಪಿ ಉಷಾಳ ಮನೆಗೆ ಆಗಾಗ ಹೋಗುತ್ತಿದ್ದ ಆಕೆಯ ಜೊತೆ ಆತ ಸಂಬಂಧ ಇಟ್ಟುಕೊಂಡಿದ್ದ ಎಂದು, ಆ ನಂತರ ಆರೋಪಿ ಉಷಾಳ ಮನೆಗೆ ಬಂದಾಗ ಮೃತ ಶಿವರಾಜನು ಸಹ ಆಕೆಯ ಮನೆಗೆಹೋಗಿದ್ದಾಗ , ಆರೋಪಿ ಮತ್ತು ಉಷಾ ಇಬ್ಬರೂ ಇರುವುದನ್ನು ನೋಡಿ , ಆರೋಪಿ ಯುವರಾಜನಿಗೆ ಅವಾಚ್ಯ ಶಬ್ದಗಳಿಂದ ಬೈದು , ನೀನು ಯಾಕೆ ಇಲ್ಲಿ ಬಂದಿದ್ದಿಯಾ , ಎಲ್ಲಿಗಾದರೂ ಹೋಗಿ ಸಾಯಿ ಇನ್ನೊಂದು ಸಾರಿ ಬಂದರೆ ಜೀವಸಹಿತ ಉಳಿಸುವುದಿಲ್ಲ ಎಂದು ಪ್ರಾಣ ಬೆದರಿಕೆ ಹಾಕಿ ಕಳುಹಿಸಿದ್ದ , ಈ ವಿಚಾರವನ್ನು ಆತ ಸಾಯುವ ಎರಡು ದಿನ ಮಾದಲು ನನ್ನ ಬಳಿ ಕಣ್ಣೀರು ಹಾಕಿಕೊಂಡು ತಿಳಿಸಿದ್ದ , ಅದಾದ ನಂತರ ನಾನು ಸ್ಥಳಕ್ಕೆ ಹೋಗಿ ನೋಡಿದಾಗ ಆತನಿಗೆ ಸಂಬಂಧಿಸಿದ ಮೋಬೈಲ್ ಫೋನ್ ಇತ್ತು, ಅದರಲ್ಲಿ ಆತ ಆರೋಪಿಯೇ ತನ್ನ ಸಾವಿಗೆ ಕಾರಣ ಎಂದು ಸಂಭಾಷಣೆಯಲ್ಲಿಹೇಳಿದ್ದ ಹಾಗೂ ವಿಡಿಯೋ ಸಹ ಮಾಡಿದ್ದ , ಅದನ್ನು ನಾನು ಸ್ವತಹ ನೋಡಿದ್ದೇನೆ ಎಂದು, ಆತನಸಾವಿಗೆ ಆರೋಪಿಯೇ ಕಾರಣ ಎಂದು ಪೊಲೀಸರ ಮುಂದೆ ನಿಪಿ.5 ರಂತೆ ಹೇಳಿಕೆ ನೀಡಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿ ಜೊತೆ ಶಾಮೀಲಾಗಿ ಆತನಿಗೆ ಸಹಾಯ ಮಾಡಲು ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಪಾಟೀಸವಾಲುಃ-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ಆರೋಪಿಪರ ವಕೀಲರು ಹಾಜರಿದ್ದು ಪಾಟೀಸವಾಲು ಇಲ್ಲ ಎಂದು ತಿಳಿಸಿರುತ್ತಾರೆ.

<u>ಮರು ವಿಚಾರಣೆಃ-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.

<u>1 ನೇ ಹೆಚ್ಚುವರಿ ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರವರ ನ್ಯಾಯಾಲಯ, ದಾವಣಗೆರೆ.</u>

<u>S.C.9/2023</u>

PW- 01

CW- 01

ಪ್ರ. ಬೋ. ದಿನಾಂಕಃ 04-11-2023

| | | |
|---|---|---|
| ಹೆಸರು ಶ್ರೀ/ಶ್ರೀಮತಿ | : | ನಾಗರಾಜ್ |
| ತಂದೆ/ಗಂಡನ ಹೆಸರು | : | ಹನುಮಂತಪ್ಪ |
| ವಯಸ್ಸು | : | 30 ವರ್ಷ |
| ಉದ್ಯೋಗ | : | ಪೇಂಟ್ ಕೆಲಸ |
| ವಾಸ | : | ಶಿವಪುರ . |

<u>ಮುಖ್ಯ ವಿಚಾರಣೆಃ</u> ಮಾನ್ಯ ಸರ್ಕಾರಿ ಅಭಿಯೋಜಕರಿಂದ.

ಚಾಸಾ-2 ರಿಂದ 15 ನನಗೆ ಗೊತ್ತು. ಚಾಸಾ-15 ನನ್ನ ಅತ್ತಿಗೆ, ಚಾಸಾ-14 ನನ್ನ ಚಿಕ್ಕಮ್ಮ. ನನ್ನ ತಂದೆ ತಾಯಿಗೆ ನಾವು ಮೂರು ಜನ ಮಕ್ಕಳು. ಮೃತ ಯುವರಾಜ ನನ್ನ ತಮ್ಮ . ನನ್ನ ತಮ್ಮ ಪೇಂಟ್ ಕೆಲಸ ಮಾಡುತ್ತಿದ್ದ. ನಾನು ಮತ್ತು ನನ್ನ ತಮ್ಮ ಹೊಳಲ್ಕೆರೆಯಲ್ಲಿ ಕೆಲಸ ಮಾಡುತ್ತಿದ್ದೇವು. ಚಾಸಾ-15 ಉಷಾ ಶಿವಪುರದಲ್ಲಿ ವಾಸ ಮಾಡುತ್ತಿದ್ದರು. ಆರೋಪಿ ನನಗೆ ಗೊತ್ತು.

2022 ನೇ ಇಸ್ವಿಯಲ್ಲಿನನ್ನ ಚಿಕ್ಕಮ್ಮ ಚಾಸಾ-14 ರವರು ನನಗೆ ಫೋನ್ ಕರೆ ಮಾಡಿ , ನಿನ್ನ ತಮ್ಮ ಮೃತಪಟ್ಟಿದ್ದಾನೆ ಎಂದು ತಿಳಿಸಿದರು. ನಾನು ವಿಚಾರ ತಿಳಿದು ಕೂಡಲೇ ಶಿವಪುರದ ನಮ್ಮ ಮನೆಗೆ ಬಂದೆ. ಸದರಿ ಮನೆಯಲ್ಲಿ ನನ್ನ ತಮ್ಮನ ಶವ ಇತ್ತು. ಆತನ ಸಾವಿಗೆ ಆರೋಪಿ ಕಾರಣ ಎಂದು ಗೊತ್ತಾಯಿತು. ನಂತರ ನನ್ನ ತಮ್ಮನ ಶವವನ್ನು ಚಿಗಟೇರಿ ಆಸ್ಪತ್ರೆಗೆ ಸಾಗಿಸಿರುತ್ತೇವೆ. ನನ್ನ ತಮ್ಮನ ಮೋಬೈಲ್ ಪರಿಶೀಲನೆ ಮಾಡಿದಾಗ ನನ್ನ ತಮ್ಮ ಆಡಿಯೋ , ವಿಡಿಯೋ ಮಾಡಿಕೊಂಡಿದ್ದಿದ್ದು ಕಂಡು ಬಂತು. ಆದ್ದರಿಂದ ಆತನ ಸಾವಿಗೆ ಆರೋಪಿಯೇ ಕಾರಣನಾಗಿರುತ್ತಾನೆ ಎಂದು ಗೊತ್ತಾಯಿತು. ನನ್ನ ಅತ್ತಿಗೆ ಚಾಸಾ-15 ಉಷಾರವರ ಮನೆಗೆ ನನ್ನ ಮೃತ ತಮ್ಮ ಹೋಗುತ್ತಿದ್ದದ್ದರಿಂದ ನನ್ನ ತಮ್ಮ ಆರೋಪಿ ಮಧ್ಯ ಜಗಳ ಆಗಿತ್ತು ಎಂದು ಗೊತ್ತಾಯಿತು. ಆ ಕಾರಣಕ್ಕೆ ಆತ ಮೃಪಟ್ಟಿರುತ್ತಾನೆ.

ಈ ಬಗ್ಗೆ ನಾನು ಪೊಲೀಸರಿಗೆ ದೂರು ನೀಡಿರುತ್ತೇನೆ. ದೂರನ್ನು ಚಾಸಾ-10 ಅರುಣ್‌ಕುಮರ್ ರವರಿಂದ ಬರೆಯಿಸಿ ನೀಡಿರುತ್ತೇನೆ.

ಸಾಕ್ಷಿ ದೂರಿನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ದೂರನ್ನು ನಿಪಿ.1 ಎಂದು , ಸಾಕ್ಷಿಯ ಸಹಿಯನ್ನು ನಿಪಿ.1(ಎ) ಎಂದು ಗುರುತಿಸಲಾಯಿತು.

ದೂರಿನ ಜೊತೆ ನನ್ನ ತಮ್ಮನ ಮೋಬೈಲ್ ಕೊಟ್ಟಿದ್ದೇನೆ. ಪೊಲೀಸರು ಮಹಜರ್ ಮಾಡಿಕೊಂಡು , ಫೋಟೋ ತೆಗೆಸಿ , ಮೋಬೈಲ್ ನ್ನು ತಮ್ಮ ವಶಕ್ಕೆ ತೆಗೆದುಕೊಂಡಿದ್ದಾರೆ. ಮೋಬೈಲ್ ಫೋನ್ ನಲ್ಲಿ ಮಾತನಾಡಿದ ವ್ಯಕ್ತಿ ನನ್ನ ತಮ್ಮ ಆಗಿದ್ದು ಮಹಜರ್ ಸಮಯದಲ್ಲಿ ಸದರಿ ದೃಷ್ಯವನ್ನು ನಾವು ನೋಡಿದ್ದೇವೆ ಮತ್ತು ಸಂಭಾಷಣೆ ಕೆಳಿಸಿಕೊಂಡಿದ್ದೇವೆ. ಸದರಿ ಧ್ವನಿ ನನ್ನ ತಮ್ಮನದು ಎಂದು ಗೊತ್ತಾಯಿತು.

ಸಾಕ್ಷಿ ಮಹಜರ್ ನಲ್ಲಿರುವ ತನ್ನ ಸಹಿ ನೋಡಿ ಗುರುತಿಸಿದ್ದು, ಮಹಜರನ್ನು ನಿಪಿ.2 ಎಂದು, ಸಾಕ್ಷಿಯ ಸಹಿಯನ್ನು ನಿಪಿ.2(ಎ) ಎಂದು ಗುರುತಿಸಲಾಯಿತು. ಸಾಕ್ಷಿ ಫೋಟೋವನ್ನು ನೋಡಿ ಗುರುತಿಸಿದ್ದು, ಅದನ್ನು ನಿಪಿ.3 ಎಂದು ಗುರುತಿಸಲಾಯಿತು. ಫೊಟೋದಲ್ಲಿರುವ ವ್ಯಕ್ತಿಗಳು ವೆಂಕಟೇಶಪ್ಪ ಮತ್ತು ಕೃಷ್ಣಮೂರ್ತಿ ಆಗಿರುತ್ತಾರೆ. ಶೀಲ್ ಕವರ್ ನಿಂದ ಮೋಬೈಲ್ ತೆರೆದು ತೋರಿಸಲಾಯಿತು. ಸದರಿ ಮೋಬೈಲನ್ನು ಸಾಕ್ಷಿ ನೋಡಿ ಗುರುತಿಸಿದು , ಅದನ್ನು ನಿಪಿ.4 ಎಂದು ಗುರುತಿಸಲಾಯಿತು. ಮೋಬೈಲ್ ಕವರ್ ಮೇಲೆ ಇರುವ ಸಹಿಯನ್ನು ಸಾಕ್ಷಿ ನೋಡಿ ಗುರುತಿಸಿರುತ್ತಾರೆ.

ಈ ಹಂತದಲ್ಲಿ ದಾವಣಗೆರೆ ಗ್ರಾಮಾಂತರ ಪೊಲೀಸ್ ಠಾಣೆಯಿಂದ ತಂದಿದ್ದ ಲ್ಯಾಪಟಾಪ್ ನಲ್ಲಿ ಸಂಭಾಷಣೆ ಮತ್ತು ದೃಷ್ಯಾವಳಿಗಳನ್ನು ಪ್ಲೇ ಮಾಡಿ ಸಾಕ್ಷಿಗೆ ತೋರಿಸಲಾಯಿತು ಮತ್ತು ಕೇಳಿಸಲಾಯಿತು. ಸದರಿ ದೃಷ್ಯಾವಳಿಯಲ್ಲಿರುವುದು ನನ್ನ ತಮ್ಮ ಹಾಗೂ ಅದರಲ್ಲಿರುವ ಸಂಭಾಷಣೆ ನನ್ನ ತಮ್ಮನದಾಗಿರುತ್ತದೆ. ಸದರಿ ದೃಷ್ಯಾವಳಿ ಮತ್ತು ಸಂಘಾಷಣೆ ನಿಪಿ.4 ರ ಮೋಬೆಎಲ್ ನಲ್ಲಿ ದಾಖಲಾಗಿರುತ್ತವೆ. ಸಾಕ್ಷಿ ನ್ಯಾಯಾಲಯದ ಮುಂದೆ ಇರುವ ಆರೋಪಿಯನ್ನು ನೋಡಿ ಗುರುತಿಸಿರುತ್ತಾರೆ.

<u>ಪಾಟೀಸವಾಲು:-</u> ಆರೋಪಿ ಪರ ಶ್ರೀ ಎಲ್.ಯು.ವಕಿಲರಿಂದ.

ನಾನು ಮತ್ತು ನನ್ನ ಹೊಳಲ್ಕೆರೆಯಲ್ಲಿ ಮತ್ತು ಶಿವಪುರದಲ್ಲಿ ನಮ್ಮ ಮನೆಯಲ್ಲಿ ತಮ್ಮ ಒಟ್ಟಿಗೆವಾಸವಾಗಿರುತ್ತೇವೆ. ಕೆಲಸಕ್ಕೆ ಹೋದರೆ ಹೊಳಲ್ಕೆರೆಯಲ್ಲಿರುತ್ತೇವೆ. ಹೊಳಲ್ಕೆರೆಯ ಯಾವ ಸ್ಥಳದಲ್ಲಿ ವಾಸ ಮಾಡುತ್ತೇವೆ ಎಂದು ಹೆಸರು ಹೇಳಲು ಆಗುವುದಿಲ್ಲ. ಶಿವಪುರದ ಮನೆಯಲ್ಲಿ ನಾನು ಮತ್ತು ನನ್ನ ತಮ್ಮ ಜೊತೆಯಲ್ಲಿ ಇರುತ್ತೇವೆ. ಚಾಸಾ-15 ರವರ ಮನೆ ನಮ್ಮ ಮನೆಯಿಂದ 50 ರಿಂದ 60 ಮೀಟರ್ ದೂರದಲ್ಲಿರುತ್ತದೆ. ನಮ್ಮ ಮನೆ ಮತ್ತು ಅವರ ಮನೆ ಸ್ಕೂಲ್ ನ ಹಿಭಾಗದಲ್ಲಿದ್ದು , ನಮ್ಮ ಮನೆ ಸ್ಕೂಲಿನ ಮುಂಭಾಗದಲ್ಲಿದ್ದು ಮನೆಗಳ ಮಧ್ಯ ಮೂರು ಮನೆಗಳ ಅಂತರವಿದೆ. ನಾನು ಮತ್ತು ನನ್ನ ತಮ್ಮ ಆ ದಿನ ಜೊತೆಯಲ್ಲಿಯೇ ಕೆಲಸ ಮಾಡುತ್ತಿದ್ದೇವು , ಆತ ಆ ದಿನ ಮಧ್ಯಹ್ನ ಕೆಲಸದ ಸ್ಥಳದಿಂದ ಮನೆಯ ಕಡೆ ಬಂದ. ಆತ ಯಾವ ದಿನಾಂಕ , ಎಷ್ಟು ಗಂಟೆ ಸಮಯದಲ್ಲಿ ಕೆಲಸದ ಸ್ಥಳದಿಂದ ಬಂದ ಎಂದು ಹೇಳಲು ನೆನಪಿಲ್ಲ. ಹೊಳಲ್ಕೇರೆಯಿಂದ ಶಿವಪುರ ಬೈಕಿನಲ್ಲಿ ಬಂದರೆ ಒಂದು ಗಂಟೆ ಬೇಕಾಗುತ್ತದೆ, ಬಸ್ಸಿನಲ್ಲಿ ಬಂದರೆ ಒಂದುವರೆ ಗಂಟೆ ಬೇಕಾಗುತ್ತದೆ. ಆತನ ಸಾವಿನ ಎಷ್ಟು ದಿನದ ಮೊದಲು ಗಲಾಟೆಯಾಗಿತ್ತು ಎನ್ನುವುದು ನನಗೆ ಗೊತ್ತಿಲ್ಲ. ನನ್ನ ತಮ್ಮ ಸದರಿ ಗಲಾಟೆ ವಿಚಾರವನ್ನು ನನ್ನ ಬಳಿ ಹೇಳಿರಲಿಲ್ಲ. ಹಾಗೂ ಆತ ತನ್ನ ವೈಯಕ್ತಿಕ ವಿಚಾರವನ್ನು ನನ್ನ ಬಳಿ ಹೇಳುತ್ತಿರಲಿಲ್ಲ.

ನನಗೆ ಆ ದಿನ ಫೋನ್ ಕರೆ ಬಂದ ನಂಬರ್ ನೆನಪಿರುವುದಿಲ್ಲ. ಕಾರಣ ನನ್ನ ಮೋಬೈಲ್ ಕಳೆದು ಹೋಗಿರುತ್ತದೆ. ಮೋಬೈಲ್ ನಂಬರ್ ನ್ನು ಮತ್ತು ಮೋಬೈಲ್ ಕಳೆದ ವಿಚಾರವನ್ನು ದೂರಿನಲ್ಲಿ ಬರೆಸಿಲ್ಲ. ದೂರನ್ನು ನಾನು ಹೇಳಿದಂತೆ ಬರೆದಿದ್ದಾರೆ, ಆ ನಂತರ ಸಹಿ ಮಾಡಿದ್ದೇನೆ. ದೂರಿನಲ್ಲಿ ಇರುವ ವಿಚಾರಗಳು ನನಗೆ ಗೊತ್ತಿಲ್ಲ ಎನ್ನುವುದು ಸರಿಯಲ್ಲ. ದೂರನ್ನು ನಾನೇ ಹೇಳಿ ಬರೆಸಿದ್ದೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮನ ಮೋಬೈಲ್ ಡಿಸ್‌ಪ್ಲೇ ಇರಲಿಲ್ಲ ಎನ್ನುವುದು ಸರಿಯಲ್ಲ. ಸದರಿ ಮೋಬೈಲ್ ನಲ್ಲಿ ಕೇವಲ ಆಡಿಯೋ ಮಾತ್ರ ಇರುತ್ತದೆ , ವಿಡಿಯೋ ಇಲ್ಲ ಎನ್ನುವುದು ಸರಿಯಲ್ಲ. ಪೊಲೀಸರಿಗೆ ನಿಮ್ಮ ತಮ್ಮನದೇ ಆಡಿಯೋ ಆಗಿರುತ್ತದೆ ಎನ್ನುವ ಬಗ್ಗೆ ಬೇರೆ ಯಾವುದಾದರೂ ಆತ ಮಾತನಾಡಿದ ಧ್ವನಿ ಮುದ್ರಣ ನೀಡಿದ್ದೀರಾ ಎಂದರೆ ಸಾಕ್ಷಿ - ಆತ ನನ್ನ ತಮ್ಮನಾಗಿರುವುದರಿಂದ ಆತನ ಧ್ವನಿಯ ಬಗ್ಗೆ ನನಗೆ ಖುದ್ದು ಗೊತ್ತಿರುತ್ತದೆ ಎಂದು

ನುಡಿದಿರುತ್ತಾರೆ. ಆ ರೀತಿಯ ಆಡಿಯೋ ನನ್ನ ತಮ್ಮನದಲ್ಲ ಎನ್ನುವುದು ಸರಿಯಲ್ಲ. ನಾನು ಉದ್ದೇಶಪೂರ್ವಕವಾಗಿ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಸಾಕ್ಷಿ ಮುಂದುವರೆದು ಸುಳ್ಳು ಹೇಳುವ ಅವಶ್ಯಕತೆ ಇಲ್ಲ ಎಂದು ನುಡಿದಿದ್ದಾರೆ. ಗಲಾಟೆ ವಿಚಾರ ಮೋಬೈಲ್ ನಲ್ಲಿ ಇರುವ ವಿಡಿಯೋ ಮೂಲಕ ನನಗೆ ಗೊತ್ತಾಗಿರುತ್ತದೆ.

ಉಷಾ ರವರ ಗಂಡ ಆರೋಪಿಯ ಬಳಿ ಹಣ ಕೊಡುವುದು ತೆಗೆದುಕೊಳ್ಳುವುದು ಮಾಡುತ್ತಿದ್ದ ಎಂದರೆ ಸಾಕ್ಷಿ - ಅದು ನನಗೆ ಗೊತ್ತಿಲ್ಲ ಎಂದು ನುಡಿದಿದ್ದಾರೆ. ಈ ವಿಚಾರ ನಿಮಗೆ ಸರಿ ಹೋಗುತ್ತಿರಲಿಲ್ಲ , ಆದ್ದರಿಂದ ನೀವು ಆರೋಪಿಯ ಮೇಲೆ ಸುಳ್ಳು ಕೇಸು ಹಾಕಿದ್ದೀರಾ ಎಂದರೆ ಸಾಕ್ಷಿ - ಆರೋಪಿಯ ಮೇಲೆ ನಮಗೆ ಯಾವುದೇ ದ್ವೇಷ ಇಲ್ಲ ಎಂದು ನುಡಿದಿದ್ದಾರೆ. ಆರೋಪಿ ಮತ್ತು ನನ್ನ ತಮ್ಮನ ಮಧ್ಯ ಯಾವುದೇ ಗಲಾಟೆ ಆಗಿಲ್ಲ ಎನ್ನುವುದು ಸರಿಯಲ್ಲ. ಈ ಕೇಸಿಗಾಗಿ ಗಲಾಟೆಯಾಗಿದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ಮೃತ ತಮ್ಮ ಉಷಾರವರೊಂದಿಗೆ ಅಕ್ರಮಸಂಬಂಧಹೊಂದಿದ್ದ ಎನ್ನುವುದು ಸರಿಯಲ್ಲ. ಅದನ್ನು ಮುಚ್ಚಿಹಾಕಲು ಈ ಸುಳ್ಳು ಪ್ರಕರಣ ಮಾಡಿದ್ದೇವೆ ಎನ್ನುವುದು ಸರಿಯಲ್ಲ. ಈ ಕೇಸಿಗೆ ತೊಂದರೆಯಾಗುತ್ತದೆ ಎಂದು ಗೊತ್ತಿದ್ದರು ಸಹ ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ನನ್ನ ತಮ್ಮನ ಸಾವಿಗೂ , ಆರೋಪಿಗೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ನನ್ನ ತಮ್ಮನೇ ತನ್ನ ವೈಯಕ್ತಿಕ ಕಾರಣದಿಂದ ನೇಣುಹಾಕಿಕೊಂಡು ಮೃತಪಟ್ಟಿದ್ದಾನೆ ಎನ್ನುವುದು ಸರಿಯಲ್ಲ. ನಾನು ಹೇಳಿದ ರೀತಿ ಯಾವುದೇ ಗಲಾಟೆಯಾಗಿರಲಿಲ್ಲ ಎನ್ನುವುದು ಸರಿಯಲ್ಲ.

ನಿಪಿ.4 ರ ಮೊಬೈಲ್ ನ ದೃಷ್ಯಾವಳಿಯಲ್ಲಿರುವುದು ನನ್ನ ತಮ್ಮನದು ಹಾಗೂ ಅದರಲ್ಲಿರುವ ಸಂಭಾಷಣೆ ನನ್ನ ತಮ್ಮನದಾಗಿರುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ. ಆರೋಪಿಗೂ ಈ ಪ್ರಕರಣಕ್ಕೂ ಯಾವುದೇ ಸಂಬಂಧವಿಲ್ಲ ಎನ್ನುವುದು ಸರಿಯಲ್ಲ. ಸುಳ್ಳುಸಾಕ್ಷಿ ಹೇಳುತ್ತಿದ್ದೇನೆ ಎನ್ನುವುದು ಸರಿಯಲ್ಲ.

<u>ಮರು ವಿಚಾರಣೆ:-</u> ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಬೆರಳಚ್ಚು ಮಾಡಲಾಯಿತು.)

ಓ. ಹೇ. ಕೇ. ಸರಿಯಾಗಿದೆ

1 ನೇ ಹೆ. ಜಿಲ್ಲಾ ಮತ್ತು ಸತ್ರ ನ್ಯಾಯಾಧೀಶರು,
ದಾವಣಗೆರೆ.